Reg. No.: KARKAN/2013/52928 Post No.: KA/SK/MND/978/2020-20222

# ಶ್ರೀ ವೈಕುಂಠ  ವಾರ್ತಾ

ಆಧ್ಯಾತ್ಮಿಕ- ಶೈಕ್ಷಣಿಕ-ಮಾಸ ಪತ್ರಿಕೆ

ಸಂಪುಟ : 22 ಸಂಚಿಕೆ : 05 ಮಂಡ್ಯ ಜುಲೈ 2023 ರೂ. : 2.00 ಪುಟಗಳು : 20









ಅಭಿನವ ಭಾರತಿ ವಿದ್ಯಾ ಕೇಂದ್ರ, ಪ್ರಾಥಮಿಕ ಶಾಲೆ, ಮಂಡ್ಯ, 21-06-2023ರಂದು ನಡೆದ ಯೋಗ ದಿನದಂದು ವಿದ್ಯಾರ್ಥಿಗಳು ಯೋಗ ಮಾಡುತ್ತಿರುವ ದೃಶ್ಯ.



ಅನಂತ ಧ್ಯಾನ ಮಂದಿರದಲ್ಲಿ ಗುರು ಪೂರ್ಣಿಮೆ ಆಚರಿಸಿದ ಒಂದು ದೃಶ್ಯ




ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ ಹೊಳಲು ಶಾಖೆಯಲ್ಲಿ ಗುರುಪೂರ್ಣಿಮಾ ಆಚರಣೆಯ ಒಂದು ದೃಶ್ಯ.



ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ ಹಳೇಬೂದನೂರು ಶಾಲೆಯಲ್ಲಿನ ಮಕ್ಕಳ ಅಕ್ಷರ ಅಭ್ಯಾಸ ಕಾರ್ಯಕ್ರಮ

## ಶ್ರೀ ವೈಕುಂಠ ವಾರ್ತಾ

ಆಧ್ಯಾತ್ಮಿಕ– ಶೈಕ್ಷಣಿಕ–ಮಾಸ ಪತ್ರಿಕೆ

ಸಂಪುಟ : 22 | ಸಂಚಿಕೆ : 05
ಮಂಡ್ಯ | ಜುಲೈ 2023
ಪುಟಗಳು : 20

**ಗೌರವ ಸಂಪಾದಕರು :**
**ಕೆ. ಎನ್. ರವಿ**

**ಪ್ರಕಾಶಕರು ಮತ್ತು ಸಂಪಾದಕರು :**
**ಶಿವಮೂರ್ತಿ ಕೀಲಾರ**
**ಅಧ್ಯಕ್ಷರು, ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್**

**ಮುದ್ರಕರು :**
**ಶಿವಪ್ರಕಾಶ್, ಐಡಿಯಲ್ ಆಫ್‌ಸೆಟ್ ಪ್ರಿಂಟರ್ಸ್ ಮಂಡ್ಯ**

**ವಾರ್ಷಿಕ ಚಂದಾ ವಿವರ: 150 ರೂಪಾಯಿಗಳು**

**ವಿಳಾಸ**
**ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್**
**5ನೇ ಕ್ರಾಸ್, ಶಂಕರನಗರ, ಮಂಡ್ಯ**


## –: ಪ ರಿ ವಿ ಡಿ :–


| ಲೇಖನಗಳು | ಪುಟ ಸಂಖ್ಯೆ |
|---|---|
| 1. ಸಂಪಾದಕೀಯ | 1 |
| 2. ಗುರು ಪೂರ್ಣಿಮ | 2 |
| 3. ಅಕ್ಷರ ಅಭ್ಯಾಸ | 3 |
| 4. ಬಸವಣ್ಣನವರು ಪ್ರತಿಪಾದಿಸಿದ ಮೌಲ್ಯಗಳು | 3 |
| 5. ಸ್ವಾಮೀಜಿಯವರ ಮೆಚ್ಚಿನ ಶ್ರೀಪತಿ ಹಾಗೂ ಅಲ್ಲಿನ ಶೈಕ್ಷಣಿಕ ಮತ್ತು ಸಮಾಜಮುಖಿ ಕಾರ್ಯಗಳು | 6 |
| 6. ದಕ್ಷಿಣಾಮೂರ್ತಿ ಸಹಿತ ಮಹಾಗಣಪತಿ ಪೂಜಾ ಕೈಂಕರ್ಯ | 8 |
| 7. ದಿನಕ್ಕೊಂದು ಕಥೆ | 10 |
| 8. ಗೆಳೆತನವೆಂಬ ಸಂಬಂಧಗಳ ನಡುವೆ ಒಂದು ಸುತ್ತು... | 10 |
| 9. ಮರಳಿ ಬಾ ಶಾಲೆಗೆ | 11 |
| 10. ನಗಲು ಬಿಗುಮಾನವೇಕೆ | 12 |
| 11. ಬದುಕಿನಲ್ಲಿ ಭರವಸೆ ತುಂಬುವ ಸಾಕಾರಾತ್ಮಕ ಆಲೋಚನೆಗಳು | 13 |
| 12. ವಿಚಾರ ವಿನಿಮಯ | 14 |
| 13. ಗಳಿಸಿದ್ದು ಜೊತೆ ಬರುವುದಿಲ್ಲ | 15 |


# ಸಂಪಾದಕೀಯ

2023–24 ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗಿದೆ. ಈ ವರ್ಷದಲ್ಲಿ ಹೊಸ ಬರವಸೆಗಳನ್ನು ಮೂಡಿಸುವ ಶೈಕ್ಷಣಿಕ ಪಠ್ಯ ಪುಸ್ತಕಗಳಲ್ಲಿ ಪಾಠ ಪ್ರವಚನಗಳನ್ನು ತೆಗೆಯುವ ಹಾಗೂ ಹೊಸದಾಗಿ ಸೇರಿಸುವ ಬಗ್ಗೆ ಗೊಂದಲ ಮುಂದುವರಿದಿದೆ.

ಭವ್ಯ ಭಾರತದ ಮುಂದಿನ ಪೀಳಿಗೆಗೆ ಯಾವ ರೀತಿ ಶಿಕ್ಷಣ ಕೊಡಬೇಕೆಂಬುದೇ ಸದ್ಯದ ಸವಾಲಾಗಿದೆ. ಮೌಢ್ಯಗಳನ್ನು ಕಿತ್ತು ಹಾಕಿ ಪ್ರಗತಿಪರ ಚಿಂತನೆಗಳನ್ನು ಮೂಡಿಸುವ ಪಾಠಗಳನ್ನು ಅಳವಡಿಸಿಕೊಳ್ಳಬೇಕೆ? ದೇಶಭಕ್ತಿ ಸ್ವತಂತ್ರ ಹೋರಾಟಗಾರರು, ದೇವರ ಮೇಲೆ ನಂಬಿಕೆ ಇತ್ಯಾದಿ ಸಂಗತಿಗಳನ್ನೊಳಗೊಂಡ ಪಠ್ಯಗಳನ್ನು ಅಳವಡಿಸಿಕೊಳ್ಳಬೇಕೆ? ಎಂಬ ವಾದ ವಿವಾದದಲ್ಲಿ ಶೈಕ್ಷಣಿಕ ವರ್ಷ ಆರಂಭವಾಗಿದೆ.

ಸ್ವತಂತ್ರ ಬಂದ ಕಳೆದ 75 ವರ್ಷಗಳಾದರೂ ಮಕ್ಕಳಿಗೆ ಯಾವ ರೀತಿ ಶಿಕ್ಷಣ ಕೊಡಬೇಕು ಎಂಬುದರ ಬಗ್ಗೆ ಒಂದು ಸ್ಪಷ್ಟತೆಯಿಲ್ಲ.ಭವ್ಯ ಭಾರತದ ಪ್ರಜೆಗಳು ಅಥವಾ ಮುಂದಿನ ಪೀಳಿಗೆಗೆ ಮಾರ್ಗದರ್ಶಕರಾಗಬೇಕಾಗಿರುವ ಹಿರಿಯರೇ ದಾರಿ ತಪ್ಪುವ ಹಂತಕ್ಕೆ ಬಂದಿದೆ. ಶಿಕ್ಷಣ, ಆರೋಗ್ಯ ಮನುಷ್ಯನಿಗೆ ಬೇಕಾಗಿರುವ ಅಗತ್ಯ ಮೂಲಭೂತ ಸೌಲಭ್ಯಗಳಲ್ಲಿ ಒಂದು. ಅವೆರಡನ್ನೂ ಸಮರ್ಪಕವಾಗಿ ನೀಡಬೇಕಾಗಿರುವುದು ಸರ್ಕಾರದ ಹೊಣೆ. ಆದರೆ ಕೆಲಸಕ್ಕೆ ಬಾರದ ಯೋಜನೆಗಳನ್ನು ರೂಪಿಸಿ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವ ಹಂತಕ್ಕೆ ತಲುಪಿದೆ.

ಹೀಗಾಗಿ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಮತ್ತು ಸಮಾನತೆ ಕಲ್ಪಿಸುವ ಸ್ವ ಉದ್ಯೋಗವಕಾಶಗಳನ್ನು ಕಲ್ಪಿಸುವ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವುದಕ್ಕೆ ಸರ್ಕಾರ ಗಮನ ನೀಡಬೇಕು. ಬೆಳೆಯುವ ಪೈರು ಮೊಳಕೆಯಲ್ಲಿ ಅದರ ಗುಣ ತೋರಿಸುವಂತೆ ವಿದ್ಯಾರ್ಥಿ ದೆಸೆಯಲ್ಲಿಯೇ ದ್ವೇಷ, ವೈಮನಸ್ಸು, ಕೋಮುವಾದ ತುಂಬುವ ಪಠ್ಯಗಳನ್ನು ಅಳವಡಿಸಲು ಸಾಮರಸ್ಯ ಜೀವನಕ್ಕೆ ನಾಂದಿ ಹಾಡುವ ಪಠ್ಯಗಳು ಅತ್ಯಗತ್ಯವಾಗಿದೆ.

**ಶ್ರೀ ಶಿವಮೂರ್ತಿ ಕೀಲಾರ**
ಅಧ್ಯಕ್ಷರು, ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್(ರಿ)
ಪ್ರಧಾನ ಕಾರ್ಯದರ್ಶಿ
ಅಭಿನವ ಭಾರತಿ ಶಿಕ್ಷಣ ಟ್ರಸ್ಟ್(ರಿ) ಮಂಡ್ಯ.

# ಗುರು ಪೂರ್ಣಿಮ

ಪೌರಾಣಿಕ ನಂಬಿಕೆಗಳ ಪ್ರಕಾರ, ಮಹಾಭಾರತದ ಲೇಖಕ ವೇದವ್ಯಾಸರ ಜನ್ಮ ದಿನವನ್ನು ಗುರು ಪೂರ್ಣಿಮೆ ಎಂದು ಪರಿಗಣಿಸಲಾಗುತ್ತದೆ. ಅವರ ಗೌರವಾರ್ಥವಾಗಿ ಈ ದಿನವನ್ನು ವ್ಯಾಸ ಪೂರ್ಣಿಮೆ ಎಂದೂ ಕರೆಯುತ್ತಾರೆ. ಗುರು ಪೂರ್ಣಿಮೆಯ ದಿನದಂದು ಮಹರ್ಷಿ ವೇದವ್ಯಾಸರು ಎಲ್ಲಾ ನಾಲ್ಕು ವೇದಗಳನ್ನು ರಚಿಸಿದರು ಮತ್ತು ಈ ಕಾರಣಕ್ಕಾಗಿ ಅವರಿಗೆ ವೇದ ವ್ಯಾಸ ಎಂದು ಹೆಸರಿಸಲಾಯಿತು ಎಂದು ಗ್ರಂಥಗಳಲ್ಲಿ ಹೇಳಲಾಗಿದೆ.

ಗುರು ಪೂರ್ಣಿಮೆಯು ಭಾರತದಲ್ಲಿ ಆಧ್ಯಾತ್ಮಿಕ ಅಥವಾ ಶೈಕ್ಷಣಿಕ ಗುರುಗಳ ಗೌರವಾರ್ಥವಗಿ ಅವರಿಗೆ ನಮನ ಸಲ್ಲಿಸಲು ಮತ್ತು ಅವರಿಗೆ ಗೌರವವನ್ನು ತೋರಿಸಲು ಆಚರಿಸಲಾಗುತ್ತದೆ.

ನಮ್ಮ ಜೀವನವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುವ ಗುರುಗಳ ಬಗ್ಗೆ ಕೃತಜ್ಞತಾಭಾವವನ್ನು ಕಾಪಾಡಿಕೊಳ್ಳಬೇಕು. ಹಿಂದೂ ಪಂಚಾಂಗದ ಪ್ರಕಾರ ಗುರು ಪೂರ್ಣಿಮಾ ಹಬ್ಬವನ್ನು ಆಷಾಡದ ಶುಕ್ಲ ಪಕ್ಷದ ಹುಣ್ಣಿಮೆಯ ದಿನದಂದು ಆಚರಿಸಲಾಗುತ್ತದೆ.

ಗುರು ಪೂರ್ಣಿಮ ಹಬ್ಬವನ್ನು ಭಾರತದಲ್ಲಿ ಮಾತ್ರವಲ್ಲದೆ ನೇಪಾಳ ಮತ್ತು ಭೂತಾನ್ ದೇಶಗಳಲ್ಲಿಯು ದೊಡ್ಡ ಪ್ರಮಾಣದಲ್ಲಿ ಆಚರಿಸಲಾಗುತ್ತದೆ. ನೇಪಾಳದಲ್ಲಿ ಗುರುಪೋರ್ಣಿಮೆಯನ್ನು ಶಿಕ್ಷಕರ ದಿನವೆಂದು ಆಚರಿಸಲಾಗುತ್ತದೆ.

ಬೌದ್ಧ ಧರ್ಮದ ಅನುಯಾಯಿಗಳು ಭಗವಾನ್ ಬುದ್ಧನ ಸ್ಮರಣೆಗಾಗಿ ಗುರುಪೂರ್ಣಿಮೆಯನ್ನು ಆಚರಿಸುತ್ತಾರೆ.

ಅವರ ನಂಬಿಕೆಯ ಪ್ರಕಾರ ಬುದ್ಧನು ಈ ದಿನದಂದು ತನ್ನ ಮೊದಲ ಧರ್ಮೋಪದೇಶವನ್ನು ನೀಡಿದನು ಅದರ ನಂತರವೇ ಬೌದ್ಧಧರ್ಮ ಪ್ರಾರಂಭವಾಯಿತು ಎಂಬ ನಂಬಿಕೆಯಿದೆ.

ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂದು ಪುರಂದರ ದಾಸರು ತಮ್ಮ ಕೀರ್ತನೆಯಲ್ಲಿ ಹೇಳಿದ್ದಾರೆ. ಯಾರು ಗುರುವಿನ ಬಗ್ಗೆ ಗೌರವ, ಪೂಜ್ಯ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾನೋ ಅವನು ಜೀವನದಲ್ಲಿ ಯಶಸ್ಸು ಸಾಧಿಸುತ್ತಾನೆ.

ಕಳೆದ 20 ವರ್ಷಗಳಿಂದಲೂ ಅಭಿನವ ಭಾರತಿ ಶಿಕ್ಷಣ ಸಮೂಹ ಸಂಸ್ಥೆಗಳಲ್ಲಿ ಗುರು ಪೂರ್ಣಿಮೆಯನ್ನು ಆಚರಿಸುತ್ತಾ ಬಂದಿದ್ದು ಈ ವರ್ಷದ ಗುರು ಪೂರ್ಣಿಮೆಯನ್ನು ದಿನಾಂಕ 03–07–2023 ರ ಸೋಮವಾರದಂದು ಆಚರಿಸಲಾಯಿತು. ಮುಂದೆಯೂ ನಿರಂತರವಾಗಿ ಈ ಆಚರಣೆಯನ್ನು ಮುಂದುವರೆಸುತ್ತೇವೆ.

ಅಭಿನವ ಭಾರತಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರು, ವೆಂಕಟೇಶ್ವರ ಧ್ಯಾನ ಕೇಂದ್ರದ, ಮಂಡ್ಯ ಇದರ ಸಂಸ್ಥಾಪಕರು ಪರಮ ಪೂಜ್ಯ ಗುರುಗಳಾದ ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿಯವರ ಸ್ಮರಣೆಯನ್ನು ಈ ಗುರು ಪೂರ್ಣಿಮೆಯ ಪುಣ್ಯ ದಿನದನದಂದು ಸಂಸ್ಥೆಯ ಎಲ್ಲಾ ಶಾಲೆಗಳಲ್ಲಿ ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು, ಈ ಮೂಲಕ ಲಕ್ಷಾಂತರ ಮಕ್ಕಳ ವಿದ್ಯಾದಾತರು, ಆಸ್ತಿಕ ಬಂಧುಗಳ ಆರಾಧ್ಯದೈವ, ಯೋಗ – ಧ್ಯಾನದ ಮಹತ್ವವನ್ನು ಮಂಡ್ಯ ಜಿಲ್ಲೆ ಸೇರಿದಂತೆ ನಾಡಿನ ಜನತೆಗೆ ತಿಳಿಸಿದ ಮಹಾ ಗುರುಗಳಿಗೆ ಗುರುನಮನ ಸಲ್ಲಿಸಲಾಯಿತು.



**–ವಿಜಯ್ ಕುಮಾರ**
ಅಭಿನವ ಭಾರತಿ
ಕಾಲೇಜ್ ಆಫ್
ಫಾರ್ಮಸಿ, ಮಂಡ್ಯ.

- ಶಿಕ್ಷಣವೆಂದರೆ ಮೊದಲೇ ಮನುಷ್ಯನಲ್ಲಿ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು.
- ವಿಕಾಸವೇ ಜೀವನ, ಸಂಕೋಚವೇ ಮರಣ. ಪ್ರೇಮವೆಲ್ಲಾ ವಿಕಾಸ, ಸ್ವಾರ್ಥವೆಲ್ಲಾ ಸಂಕೋಚ. ಆದ್ದರಿಂದ, ಪ್ರೇಮವೇ ಬದುಕಿನ ಧರ್ಮ.
- ಇದೊಂದು ದೊಡ್ಡ ಸತ್ಯ; ಶಕ್ತಿಯೇ ಜೀವನ, ದುರ್ಬಲತೆಯೇ ಮರಣ; ಶಕ್ತಿಯೇ ಪರಮಾನಂದ, ಅಖಂಡಜೀವನ, ಅಮರತ್ವ. ದುರ್ಬಲತೆಯೇ ಅನವರತ ದುಃಖ, ತಳಮಳ, ಮರಣ.
- ಎದ್ದೇಳಿ, ಕಾರ್ಯೋನ್ಮುಖರಾಗಿ. ಈ ಬದುಕಾದರೂ ಎಷ್ಟು ದಿನ. ಮಾನವರಾಗಿ ಹುಟ್ಟಿದ ಮೇಲೆ ಏನಾದರೂ ಸಾಧಿಸಿ.

**–ಸ್ವಾಮಿ ವಿವೇಕಾನಂದ**

# ಅಕ್ಷರ ಅಭ್ಯಾಸ

ನಮಸ್ಕಾರ, 08/06/2023 ರಂದು ನಡೆದಂತಹ ಅಕ್ಷರ ಅಭ್ಯಾಸ ಕಾರ್ಯಕ್ರಮ ತುಂಬಾ ಸೊಗಸಾಗಿ ಮೂಡಿ ಬಂದಿತು. ಪೋಷಕರಾಗಿ ನಮ್ಮನ್ನು ಆಹ್ವಾನಿಸಿದ್ದು ತುಂಬಾ ಖುಷಿ ಕೊಟ್ಟಿತು. ಪ್ರಸ್ತುತ ವಿದ್ಯಾಮಾನಗಳ ಪ್ರಕಾರ ಮಕ್ಕಳನ್ನು ಪಾಶ್ಚಿಮಾತ್ಯ ರೀತಿಯಲ್ಲಿ ಸ್ವಾಗತಿಸುತ್ತಾರೆ. ಆದರೆ ಮೊದಲ ಬಾರಿಗೆ ನಮ್ಮ ಹಿಂದೂ ಸಂಪ್ರದಾಯದಂತೆ ಅಕ್ಷರ ಅಭ್ಯಾಸವನ್ನು ಮಾಡಿಸಿದ್ದು ಗಮನಾರ್ಹ. ಮಕ್ಕಳಿಗೆ ಕೇವಲ ಶಿಕ್ಷಣ ಮುಖ್ಯವಲ್ಲ, ಸಂಸ್ಕೃತಿ, ಸಂಪ್ರದಾಯ, ಶಿಸ್ತು ಬಹಳ ಮುಖ್ಯ ಆದರೆ ಅದನ್ನು ಅನುಸರಿಸುತ್ತಿರುವುದು ಬೆರಳೆಣಿಕೆಯಷ್ಟು ಮಾತ್ರ. ತಾಯಿ ಸರಸ್ವತಿಯ ಆಶೀರ್ವಾದದೊಂದಿಗೆ ಪೌರೋಹಿತ್ಯ ಅನುಸಾರವಾಗಿ ಅಕ್ಷರಾಭ್ಯಾಸ ಕಾರ್ಯಕ್ರಮ ಸುಲಲಿತವಾಗಿ ಮೂಡಿ ಬಂದಿತು. ಜೊತೆಗೆ ತಾಯಂದಿರು ಸಂಪ್ರದಾಯದಂತೆ ಸೀರೆ ಧರಿಸಿ ಬಂದ ವಿಷಯ ತುಂಬಾ ಖುಷಿತಂದಿತು. ಜೊತೆಗೆ ವಿದ್ಯಾರ್ಥಿಗಳ ಕೆಲವು ಪೋಷಕರು ಬಾರದಿದ್ದಾಗ ಪೋಷಕರ ಜಾಗದಲ್ಲಿ ಟೀಚರ್‌ಗಳು ನಿಂತು ಅಕ್ಷರಾಭ್ಯಾಸ ಮಾಡಿಸಿದ ವಿಷಯ ತುಂಬಾ ಖುಷಿ ತಂದಿತು.

ನನ್ನ ಮಗುವಿನ ದಾಖಲಾತಿ ಸಮಯದಲ್ಲಿ ಗಮನಿಸಿದ ವಿಷಯ ಖುಷಿ ತಂದಿತು. ಮಕ್ಕಳಲ್ಲಿನ ಶಿಸ್ತು, ಜೊತೆಗೆ ಶಿಕ್ಷಕರು ಪೋಷಕರ ನಡುವಿನ ಬಾಂಧವ್ಯ ಮನೆಯ ವಾತಾವರಣವನ್ನು ನೆನಪಿಸಿತು. ಮಕ್ಕಳಿಗೆ ಪಾಠದ ಜೊತೆಗೆ ನಮ್ಮ ಸಂಸ್ಕಾರ, ಸಂಸ್ಕೃತಿಯನ್ನು ಅದರ ಪ್ರಾಮುಖ್ಯತೆಯನ್ನು ಮಕ್ಕಳಿಗೆ ತಿಳಿಸುತ್ತಿರುವ ವಿಷಯ ಸಂತೋಷವನ್ನು ತಂದಿತು.

ಧನ್ಯವಾದಗಳು

ಅರ್ಪಿತಾ ಬಿ, ಪೋಷಕರು
ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ
ಹಳೇಬೂದನೂರು.

# ಬಸವಣ್ಣನವರು ಪ್ರತಿಪಾದಿಸಿದ ಮೌಲ್ಯಗಳು

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಾಮಾಜಿಕ ಆಂದೋಲನ ಚರಿತ್ರಾರ್ಹವಾದುದು. ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಅಸಮಾನತೆ, ಸ್ತ್ರೀಶೋಷಣೆ, ಮೌಢ್ಯ, ವರ್ಣಭೇದ, ವರ್ಗಭೇದಗಳ ತಾರತಮ್ಯದಿಂದ ತತ್ತರಿಸಿ ಹೋಗಿದ್ದ ಮಾನವ ಸಮುದಾಯಕ್ಕೆ ದಯೆ, ಪ್ರೀತಿ, ಅನುಕಂಪದ ಮಾನವೀಯ ಸ್ಪರ್ಶವನ್ನು ನೀಡಿದ ಬಸವಣ್ಣನವರ ಸಾರಥ್ಯದಲ್ಲಿ ನಡೆಸಿದ ಸಮಗ್ರಕ್ರಾಂತಿ ವಿಶ್ವದ ಇತಿಹಾಸದಲ್ಲಿಯೇ ಅಪೂರ್ವವಾದುದು.

ಜಗಜ್ಯೋತಿ ಬಸವಣ್ಣನವರ ನೇತೃತ್ವದಲ್ಲಿ ನಡೆದಂತಹ ಸಮಗ್ರ ಕ್ರಾಂತಿಯ ಮೂಲ ಪ್ರೇರಣೆಯೇ ದಯೆ ಎಂಬ ಜೀವದ್ರವ್ಯ.

**ದಯವಿಲ್ಲದ ಧರ್ಮವದಾವುದಯ್ಯಾ**
**ದಯವೇ ಬೇಕು ಸಕಲಪ್ರಾಣಿಗಳೆಲ್ಲರಲ್ಲಿ**
**ದಯವೇ ಧರ್ಮದ ಮೂಲವಯ್ಯಾ**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ**

ಈ ವಚನದ ಮೂಲಕ ತಮ್ಮ ಸಾಮಾಜಿಕ ಕ್ರಾಂತಿಯ



ಆಶಯಗಳಿಗೆ ಮಾನವ ಪ್ರೇಮವನ್ನೇ ಆಧಾರಸ್ತಂಭವಾಗಿ ಅವಲಂಬಿಸಿಕೊಂಡು ಜಗತ್ತಿನ ಸರ್ವರನ್ನೂ ಸಮಾನವಾಗಿ ಕಾಣುವ ಮೂಲಕ ವಿಶ್ವ ಭ್ರಾತೃತ್ವವನ್ನು ಪ್ರತಿಪಾದಿಸಿದವರು ಜಗಜ್ಜ್ಯೋತಿ ಬಸವಣ್ಣನವರು.

ವಿಶ್ವದ ಪ್ರಪ್ರಥಮ ಪ್ರಜಾಸತ್ತಾತ್ಮಕ ಸಂಸ್ಥೆಯೆಂದೇ ಕರೆಯಲ್ಪಡುವ ಅನುಭವ ಮಂಟಪದ ಪರಿಕಲ್ಪನೆಯನ್ನು ಸಾಕಾರಗೊಳಿಸಿ, ತಮ್ಮ ಸಮಕಾಲೀನ ಶರಣರೊಂದಿಗೆ ಅಂದಿನ ಸಮಾಜದ ಸಾಮಾಜಿಕ ತಲ್ಲಣಗಳ ಬಗ್ಗೆ, ಸಮಸ್ಯೆಗಳ ಬಗ್ಗೆ ಅನುಭಾವದ ನೆಲೆಯಲ್ಲಿ ಅವರು ಪ್ರಜಾಸತ್ತಾತ್ಮಕ ರೀತಿಯಲ್ಲಿ, ಸಮಾನತೆಯ ನೆಲೆಯಲ್ಲಿ ಸಂವಾದ ನಡೆಸುತ್ತಿದ್ದ ರೀತಿ ಅನನ್ಯವಾದುದು. ವಿವಿಧ ಕಾಯಕಗಳ ಹಿನ್ನೆಲೆಯಲ್ಲಿ ವಿಶೇಷವಾಗಿ ವಿವಿಧ ಕೆಳಸ್ತರಗಳಿಂದ ಬಂದಂತಹ ಶರಣರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವ ಮೂಲಕ ಜಾತಿ ಸಂಘರ್ಷಗಳ ಮೂಲ ಬೇರನ್ನು ಸಮಾಜದಿಂದ ಕಿತ್ತೊಗೆಯಲು ಅವರು ನಡೆಸಿದ ವೈಚಾರಿಕ ನೆಲೆಯಲ್ಲಿನ ಸಾಮಾಜಿಕ ಕ್ರಾಂತಿ ಇಡೀ ವಿಶ್ವಕ್ಕೆ ಆದರ್ಶವಾದುದು, "ಸಕಲ ಜೀವಾತ್ಮರಿಗೆ ಸಂದೇಶದ ಮೂಲಕ ತಮ್ಮ ಆತ್ಮಕಲ್ಯಾಣದ ಜೊತೆಗೆ ಲೋಕದ ಕಲ್ಯಾಣ ವನ್ನು ಬಯಸಿದ ಶ್ರೇಷ್ಠ ಜಾತ್ಯತೀತ ಕಲ್ಪನೆಯನ್ನು ಸಾಕಾರ ಗೊಳಿಸಿದ ಧೀಮಂತ ದಾರ್ಶನಿಕರು ಬಸವಣ್ಣನವರು.

ಬಸವಣ್ಣನವರು ಲೌಕಿಕ ಬದುಕನ್ನು ನಿರಾಕರಿಸಿದವರಲ್ಲ. ಲೌಕಿಕ ಬದುಕಿನಿಂದ ಅವರು ಪಲಾಯನವಾದಿಗಳಾಗಲಿಲ್ಲ. ಅವರು ಬದುಕನ್ನು ಪ್ರೀತಿಸಿದವರು. ಸ್ವರ್ಗ–ನರಕಗಳ ಕಲ್ಪನೆಯನ್ನು ನಿರಾಕರಿಸಿ "ಆಚಾರವೇ ಸ್ವರ್ಗ, ಅನಾಚಾರವೇ ನರಕ" ಎಂಬ ಗುಣಾತ್ಮಕ ಶೀಲವಂತ ಸಮಾಜದ ಕಲ್ಪನೆಗೆ ಕಾರಣವಾದವರು ಶರಣರ ಬದುಕಿನಲ್ಲಿ ಸೋಮಾರಿಗಳಿಗೆ ಸ್ಥಾನವೇ ಇರಲಿಲ್ಲ. ಅವರದು ಕಾಯಕವೇ ಪ್ರಧಾನವಾಗಿದ್ದ ಆಧ್ಯಾತ್ಮ ಚಿಂತನೆ. "ಕಾಯಕವೇ ಕೈಲಾಸ" ಎಂಬ ಕಾಯಕ ಸೂತ್ರವನ್ನು ಇಡೀ ವಿಶ್ವಕ್ಕೆ ನೀಡಿದ ಬಸವಾದಿ ಶರಣರು ಕಾಯಕಕ್ಕೆ ನೀಡಿದಷ್ಟೇ ಮಹತ್ವವನ್ನು ದಾಸೋಹಕ್ಕೂ ನೀಡಿದವರು. ಶರಣರ ದೃಷ್ಟಿಯಲ್ಲಿ ಕಾಯಕವು ಸತ್ಯ ಶುದ್ಧವಾಗಿರಬೇಕು. ಅವರ ದೃಷ್ಟಿಯಲ್ಲಿ ಭಕ್ತಿಯೆಂದರೆ ಬೆವರು ಸುರಿಸಿ ಕಾಯಕ ಮಾಡಿ ಅದರಿಂದ ಬಂದ ಫಲವನ್ನು ಸಮಾಜಕ್ಕೆ ಧಾರೆಯೆರುವಂತಹ ಅನನ್ಯವಾದ ಸಮಾಜಮುಖಿಯಾದ ವಿಚಾರಧಾರೆ. ಕಾಯಕ ಮತ್ತು ದಾಸೋಹ ಸಿದ್ಧಾಂತ ಬಸವಾದಿ ಶರಣರು ವಿಶ್ವಕ್ಕೆ ನೀಡಿದ ಒಂದು ಮಹಾನ್ ಸಾಮಾಜಿಕ, ಆರ್ಥಿಕ ಸೂತ್ರ. ಕರ್ಮ ಸಿದ್ಧಾಂತವನ್ನಾಗಿ, ದಾನ ಸಿದ್ಧಾಂತವನ್ನು ದಾಸೋಹ ಸಂಸ್ಕೃತಿಯನ್ನಾಗಿ ರೂಪಾಂತರಿಸಿದ ಹಿರಿಮೆ ಬಸವಣ್ಣನವರಿಗೆ ಸಲ್ಲುತ್ತದೆ.

ಬಸವಣ್ಣನವರು ಇಡೀ ಜಗತ್ತಿಗೆ ಅನ್ವಯವಾಗುವಂತಹ ಒಂದು ವಿಶಿಷ್ಟವಾದ ಜೀವನ ಸಂವಿಧಾನವನ್ನು ನೀಡಿದ ಮಾನವ ಸಂವಿಧಾನ ಶಿಲ್ಪಿಗಳು.

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ**
**ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ**
**ತನ್ನ ಬಣ್ಣಿಸಬೇಡ, ಇದಿರ ಅಳಿಯಲು ಬೇಡ.**
**ಇದೇ ಅಂತರಂಗಶುದ್ಧಿ, ಇದೇ ಬಹಿರಂಗ ಶುದ್ಧಿ**
**ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.**

ಬಸವಣ್ಣನವರು ಈ ವಚನದ ಮೂಲಕ ನೀಡಿದಂತಹ ಜಾಗತಿಕ ಸಂದೇಶ ಎಲ್ಲ ಕಾಲಕ್ಕೂ ಎಲ್ಲ ಸಮುದಾಯಕ್ಕೂ ಅನ್ವಯವಾಗುವಂತಹ ಒಂದು ಬದುಕಿನ ಶಾಶ್ವತ ನೀತಿ ಸಂಹಿತೆಯಾಗಿದೆ. ಈ ವನಚನದ ಆಶಯಗಳು ಇಡೀ ಮಾನವ ಸಮುದಾಯಕ್ಕೆ ನೀಡಿದ ಆದರ್ಶ ಜೀವನ ಸೂತ್ರಗಳಾಗಿವೆ. ಬಸವಾದಿ ಶರಣರು ನಡೆಸಿದ ಸಮಗ್ರ ಕ್ರಾಂತಿಗೆ ಈ ನೀತಿ ಪ್ರಧಾನವಾದ ವಚನವೇ ಮೂಲ ಪ್ರೇರಣೆ.

ಬಸವಣ್ಣನವರು ಇಡೀ ವಿಶ್ವವನ್ನೇ ಪ್ರೀತಿಸುವ ಸಂದೇಶವನ್ನು ಕೊಟ್ಟಂತಹ ಮಹಾನ್ ದಾರ್ಶನಿಕರು.

**ಇವನಾರವ, ಇವನಾರವಿವನಾರವನೆಂದೆನಿಸದಿರಯ್ಯ,**
**ಇವನಮ್ಮವ, ಇವನಮ್ಮವ ಇವನಮ್ಮವನೆಂದೆನಿಸಯ್ಯ..**
**ಕೂಡಲಸಂಗಮದೇವಾ ನಿಮ್ಮ ಮಗನೆಂದೆನಿಸಯ್ಯಾ.**

ಇಂದು ಜಾತಿ, ಧರ್ಮ, ಉಚ್ಚ–ನೀಚ, ಮೇಲು–ಕೀಳು ಎಂಬ ಭಾವನೆಯಿಂದ ಜಗತ್ತಿನಲ್ಲಿ ನಡೆಯುತ್ತಿರುವ ಸಂಕುಚಿತ ಮನೋಧರ್ಮದ ಸಂಘರ್ಷಗಳಿಗೆ, ದಿಕ್ಕುಗೆಟ್ಟ ಸಮಾಜಕ್ಕೆ ಪ್ರೀತಿ, ಸಮಾನತೆ, ಸ್ವಾಭಿಮಾನದ ಮೌಲ್ಯಗಳನ್ನು ಸಾರುವ ಈ ವಚನವು ಇಡೀ "ವಿಶ್ವವೇ ನಮ್ಮ ಕುಟುಂಬ ವಿಶ್ವದ ಎಲ್ಲರೂ ನಮ್ಮವರೇ" ಎಂಬ ಅವರ ವಿಶಾಲವಾದ ಮಾನವ ಪ್ರೇಮ ವಿಶೇಷವಾಗಿ ಶೋಷಿತವರ್ಗದ ಮೇಲೆ ಅವರಿಗಿದ್ದ ಪ್ರೀತಿ ಮತ್ತು ಗೌರವದ ಸಂಕೇತವಾಗಿದೆ.

ಬಸವಣ್ಣನವರು ಸ್ತ್ರೀಸಮಾನತೆಯನ್ನು ಪ್ರತಿಪಾದಿಸಿ ಅಗ್ರಗಣ್ಯ ಸಮಾಜ ಸುಧಾರಕರು.

**ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ,**
**ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ,**
**ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ,**
**ಇದಾವಾವ ಪರಿಯಲ್ಲಿ ಕಾಡಿಹಿತು ಮಾಯೆ,**
**ಈ ಮಾಯೆಯ ಕಳೆವಡೆ ಎನ್ನಳವಲ್ಲ,**
**ನೀವೆ ಬಲ್ಲಿರಿ ಕೂಡಲಸಂಗಮದೇವಾ.**

ಈ ವಚನವು ಒಂಬತ್ತು ಶತಮಾನಗಳ ಹಿಂದೆಯೇ ಬಸವಣ್ಣನವರು ಸ್ತ್ರೀ ಸಮುದಾಯದಬಗ್ಗೆ ತೋರಿದ ಸಮಾನತೆ ಹಾಗೂ ಗೌರವದ ಸಂಕೇತವಾಗಿದೆ. ಸ್ತ್ರೀ ಸಮಾನತೆಯ ಕ್ರಾಂತಿಕಾರಕ ಸಂದೇಶವನ್ನು ಜಗತ್ತಿಗೆ ನೀಡಿದ ಮೊದಲ ಸಾಮಾಜಿಕ ಸುಧಾರಕರು ಬಸವಣ್ಣನವರು ಎಂಬುದು ಹೆಮ್ಮೆಯ ವಿಷಯವಾಗಿದೆ.

ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ರಚಿಸಿದ ವಚನಗಳು ಕನ್ನಡ ಸಾಹಿತ್ಯ ಪ್ರಪಂಚದ ಅನಿಭಾವದ ನುಡಿಮುತ್ತುಗಳು. ಅವರು ವಚನಗಳನ್ನು ರಚಿಸಿದ್ದು ಪಾಂಡಿತ್ಯ ಪ್ರದರ್ಶನಕ್ಕಾಗಿ ಅಲ್ಲ. ತಮ್ಮ ಸಾಹಿತ್ಯ ಪ್ರತಿಭೆಯನ್ನು ಪ್ರದರ್ಶಿಸಲಿಕ್ಕಾಗಿಯೂ ಅಲ್ಲ. ಶರಣರು ರಚಿಸಿದ ವಚನಗಳು ಅವರ ಅಂತರಂಗದಲ್ಲಿ ಆತ್ಮ ಸಾಕ್ಷಿಯ ಮೂಲಕ ಅನುಭಾವ ನೆಲೆಯಲ್ಲಿ ಅರಳಿದ ಶಿದ್ಧ ಭಾವನೆಗಳ ಅಭಿವ್ಯಕ್ತಿ. ಪವಿತ್ರ ಭಾವನೆಗಳ ರಸಗಂಗೆ.

**ಉಳ್ಳವರು ಶಿವಾಲಯವ ಮಾಡಿಹರು,**
**ನಾನೇನ ಮಾಡುವೆ ಬಡವನಯ್ಯಾ,**
**ಎನ್ನ ಕಾಲೇ ಅಂಬ, ದೇಹವೇ ದೇಗುಲ,**
**ಶಿರಹೊನ್ನ ಕಳಶವಯ್ಯಾ,**
**ಕೂಡಲಸಂಗಮದೇವಾ, ಕೇಳಯ್ಯಾ**
**ಸ್ಥಾವರಕ್ಕಳಿವುಂಟೊ, ಜಂಗಮಕ್ಕಳಿವಿಲ್ಲ.**

ಬಸವಣ್ಣನವರು “ದೇಹವೇ ದೇಲಾಲಯ” ಎಂಬ ಸಂದೇಶ ನೀಡಿದವರು. ಅಂತರಂಗ ಶುದ್ಧಿಗೆ ಆದ್ಯತೆ ನೀಡಿದವರು. ಮೃದು ವಚನಗಳೇ ಸಕಲ ಜಪಂಗಳೆಂದು, ನುಡಿದರೆ ಮುತ್ತಿನ ಹಾರದಂತಿರಬೇಕೆಂದು ಮಾತಿನ ಮಹತ್ವವನ್ನು ಸಾರಿದವರು.ಎನಗಿಂತ ಕಿರಿಯರಿಲ್ಲ ಎಂಬ ಭಾವನೆಯ ಮೂಲಕ ಇಡೀ ಜಗ್ಗಿಗೆ ವಿನಮ್ರತೆಯ ಒಂದು ಆದರ್ಶವಾದ ಜಾಗತಿಕ ಸಂದೇಶವನ್ನು ನೀಡಿದವರು.

**ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ**
**ಧರೆ ಹತ್ತಿ ಉರಿದಡೆ ನಿಲಲುಬಾರದು.**
**ಏರಿ ನೀರುಂಡೆ, ಬೇಲಿ ಕೆಯ್ಯ ಮೇವಡೆ**
**ನಾರಿ ತನ್ನ ಮನೆಯಲ್ಲಿ ಕಳುವಡೆ,**
**ತಾಯ ಮೊಲೆ ಹಾಲು ನಂಜಾಗಿ ಕೊಲುವಡೆ**
**ಇನ್ಯಾರಿಗೆ ದೂರುವೆ ಕೂಡಲ ಸಂಗಮದೇವ**

ಈ ವಚನದ ಮೂಲಕ ಬಸವಣ್ಣನವರು ಇಂದಿನ ಸಮಾಜದ ನೈತಿಕ ಮೌಲ್ಯಗಳ ಅಧಃಪತನದ ಬಗ್ಗೆ ಒಂಬತ್ತು ಶತಮಾನಗಳ ಹಿಂದೆಯೇ ಕಲ್ಪಿಸಿಕೊಂಡಿದ್ದು ಅವರ ದಾರ್ಶನಿಕ ಚಿಂತನೆಯ ದೂರದರ್ಶಿತ್ವದ ಸಂಕೇತವಾಗಿದೆ. ಇದು ಇಂದಿನ ಸಾಮಾಜಿಕ ಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. ಸ್ವಜನಪಕ್ಷಪಾತ, ಭ್ರಷ್ಟಾಚಾರ, ಹಿಂಸಾಚಾರ, ಭಯೋತ್ಪಾದನೆ ಮುಂತಾದ ಸಾಮಜಿಜಕ ಅನಿಷ್ಟಗಳಿಂದ ಕುಸಿಯುತ್ತಿರುವ ಮನವೀಯ ಮೌಲ್ಯಗಳ ಬಗ್ಗೆ ಬಸವಣ್ಣನವರು ತಮ್ಮ ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಬಸವಣ್ಣನವರ ಚಿಂತನೆಗಳಲ್ಲಿ ವಿಶ್ವದ ಎಲ್ಲಾ ದಾರ್ಶನಿಕರ ಸಂದೇಶಗಳನ್ನು ಕಾಣಬಹುದಾಗಿದೆ. ಕಾಯಕ–ದಾಸೋಹ ಸಿದ್ಧಾಂತ, ಜಾತ್ಯಾತೀತ ಸಮಾಜದ ಪರಿಕಲ್ಪನೆ, ವಿಶ್ವಭ್ರಾತೃತ್ವ, ಸ್ತ್ರೀ ಸಮುದಾಯದ ಸಮಾನತೆ, ವೈಚಾರಿಕ ಪ್ರಜ್ಞೆ, ಇಹಪರಗಳ ಸಮನ್ವಯ, ನಡೆನುಡಿಯಲ್ಲಿ ಪರಿಶುದ್ಧತೆ ಮುಂತಾದ ಮಹಾನ್ ಕ್ರಾಂತಿಕಾರಕ ಚಿಂತನೆಗಳಿಂದ ಶೋಷಣೆರಹಿತವಾದ ಸಮಾಜದ ಸೃಷ್ಟಿಗಾಗಿ ಒಂಬತ್ತು ಶತಮಾನಗಳ ಹಿಂದೆಯೇ ಒಂದು ವಿನೂತನವಾದ ಸಮಗ್ರ ಕ್ರಾಂತಿಯನ್ನು ನಡೆಸಿದ ಬಸವಣ್ಣ ನವರು ವಿಶ್ವ ಕಂಡಂತಹ ಒಬ್ಬ ಮಹಾನ್ ಮಾನವತಾವಾದಿ ಗಳು. ಜಾಗತಿಕ ನೆಲೆಯಲ್ಲಿ ಇಂದು ನಡೆಯುತ್ತಿರುವ ಹಿಂಸಾಚಾರ ಭಯೋತ್ಪಾದನೆಗಳಿಗೆ ಬಸವಾದಿ ಶರಣರು ಪ್ರತಿಪಾದಿಸಿದ ವಿಶ್ವಭಾತೃತ್ವದ ಮೌಲ್ಯಗಳು ಪರಿಹಾರ ಸೂತ್ರಗಳಾಗಿವೆ. ಬಸವಣ್ಣನವರು ಪ್ರತಿಪಾದಿಸಿದ ಆದರ್ಶ ಮೌಲ್ಯಗಳು ನಮ್ಮೆಲ್ಲರಿಗೆ ಸನ್ಮಾರ್ಗದಲ್ಲಿ ನಡೆಯುವಂತಹ ಬೆಳಕನ್ನು ನೀಡುವಂತಾಗಲಿ.

**–ಸಂಗ್ರಹ**

**ನೀವು ಯಶಸ್ಸನ್ನು ಪಡೆಯಲು ದೃಢ ಪ್ರಯತ್ನಬೇಕು, ಅಪಾರ ಇಚ್ಛಾಶಕ್ತಿ ಬೇಕು. 'ನಾನು ಸಮುದ್ರವನ್ನೇ ಪಾನಮಾಡುತ್ತೇನೆ', ಎಂದು ಪ್ರಯತ್ನಶೀಲನು ಹೇಳುತ್ತಾನೆ. 'ನನ್ನ ಸಂಕಲ್ಪದ ಮುಂದೆ ಪರ್ವತಗಳೇ ಪುಡಿಪುಡಿಯಾಗುತ್ತವೆ' ಎನ್ನುತ್ತಾನವನು. ಇಂತಹ ಶಕ್ತಿಯನ್ನೂ ಛಾತಿಯನ್ನೂ ಪಡೆಯಿರಿ; ಕಷ್ಟಪಟ್ಟು ದುಡಿಯಿರಿ, ನೀವು ಗುರಿ ಸೇರುವುದು ನಿಶ್ಚಯ.**

**–ಸ್ವಾಮಿ ವಿವೇಕಾನಂದ**

# ಸ್ವಾಮೀಜಿಯವರ ಮೆಚ್ಚಿನ ಶ್ರೀಪತಿ ಹಾಗೂ ಅಲ್ಲಿನ ಶೈಕ್ಷಣಿಕ ಮತ್ತು ಸಮಾಜಮುಖಿ ಕಾರ್ಯಗಳು

**"ಭಗವತೋ ಬಲೇನ ಭಗವತೋ ವೀರ್ಯನ ಭಗವದಃ ತೇಜಸಾ**
**ಭಗವತಾ ಕರ್ಮಣಾ ಕರ್ಮಕರಿಷ್ಯಾಮಿ ಭಗವತೋ ವಾಸುದೇವಸ"**

ಭಗವದ್ಗೀತೆಯ ಈ ಶ್ಲೋಕದ ಅರ್ಥ " ನಾನು ಮಾಡುವ ಪ್ರತಿಯೊಂದು ಕೆಲಸಗಳು ನನ್ನ ಕೆಲಸವಲ್ಲ ನನ್ನೊಳಗಿರುವ ಗೋವಿಂದ ಮಾಡುವ ಕೆಲಸ" – ಈ ಮಾತು ಸ್ವಾಮೀಜಿಯವರಿಗೆ ಅಕ್ಷರಶ: ಸಲ್ಲುತ್ತದೆ. ಕಾಶೀ ವಿಶ್ವನಾಥನ ಪವಿತ್ರ ಮಣ್ಣಿನಲ್ಲಿ ಹುಟ್ಟಿ, ಹಲವಾರು ಸಾಧು ಸಂತರ ಸಾನಿಧ್ಯದಲ್ಲಿ ವಿದ್ಯೆಯನ್ನು ಕರಗತ ಮಾಡಿಕೊಂಡು ಪವಿತ್ರ ಕಾವೇರಿಯ ಸನ್ನಿಧಿಯ ತಾಣವಾದ ಮಂಡ್ಯದ ನೆಲದಲ್ಲಿ "ಅಭಿನವ



ಭಾರತಿ" ಎಂಬ ವಿಶಾಲ ಸಂಸ್ಥೆಯನ್ನು ಕಟ್ಟಿದ್ದೇ ರೋಚಕ.....

ಇಂದು ಈ ಸಂಸ್ಥೆ ಸಾಧಿಸಿರುವ ಸಾಧನೆಯಲ್ಲಿ ಒಬ್ಬ ತ್ಯಾಗಮಯಿ, ಬ್ರಹ್ಮಚಾರಿಯ ಅವಿರತ ಹೋರಾಟ, ಅನುಪಮ ಛಲವಿದೆ. ಆ ಛಲವಂತರೆ, ಪೂಜ್ಯ ಸ್ವಾಮೀಜಿಯವರು, "ಅಭಿನವ ಭಾರತಿ ಸಂಸ್ಥೆ" ನಗರದಲ್ಲಿ ಹೆಚ್ಚು ಪ್ರಸಿದ್ಧಿಗೆ ಬಂದ ಮೇಲೆ ದಾದಾಜೀ ಮನಸ್ಸಿನಲ್ಲಿ, ವಿದ್ಯೆ ಕೇವಲ ನಗರಕ್ಕೆ ಸೀಮಿತವಾಗಬೇಕೆ? ಜ್ಞಾನ ನಗರದಲ್ಲಷ್ಟೇ ಮುಡುಗಟ್ಟಬೇಕೆ? ಎಂಬ ವಿಶಾಲ ಹೃದಯದ ತುಡಿತವೇ 'ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ'ದ ಪ್ರಾರಂಭ....

"ನಾಡೆಂಬ ದೇಹಕ್ಕೇ ರೂಢಪತಿಯೇ ಪ್ರಾಣ" ಎಂಬ ನಾಣ್ಣುಡಿಯಂತೆ, ಸ್ವಾಮೀಜಿಯವರಿಗೆ ಎಲ್ಲಾ ಶಾಖೆಗಳಿಗಿಂತ ವಿಶೇಷ ಪ್ರೀತಿ, ಮೂಡಲದೊಡ್ಡಿಯ ಶ್ರೀಪತಿ ಮೇಲೆ ಎಂದರೆ ತಪ್ಪಲ್ಲ, ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಕೊಪ್ಪ ಸಮೀಪದ "ಮೂಡಲದೊಡ್ಡಿ" ಎಂಬ ಪುಟ್ಟ ಸ್ಥಳ. ಸುತ್ತಮುತ್ತಲೂ ಬೆಟ್ಟಗುಡ್ಡಗಳ ತಪ್ಪಲು, ಸದಾ ಪ್ರಶಾಂತತೆಯನ್ನೇ ಆವರಿಸಿದ ಪರಿಸರ, ಇಲ್ಲಿನ ಮುಗ್ಧ ಜನರ ಪ್ರೀತಿ, ದಾದಾಜೀಯ ವಿಶೇಷ ಪ್ರೀತಿಗೆ ಕಾರಣ...

ಮೂಡಲ ದೊಡ್ಡಿಯ " ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ" ಶಾಲೆ 2002–03 ರಲ್ಲಿ ಕೇವಲ 15 ಮಕ್ಕಳೊಂದಿಗೆ ಪ್ರಾರಂಭವಾದ ಶಾಲೆ, ಇಂದು ಇಂಗ್ಲೀಷ್‌ಯಿಂದ ಪದವಿಪೂರ್ವ ಶಿಕ್ಷಣದವರೆಗೆ ಅತ್ಯಂತ ಉತ್ಕೃಷ್ಟ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದೆ. ಈ ಸಂಸ್ಥೆ ಸರ್ವಾಂಗೀಣ ಅಭ್ಯುದಯದ ಹಾದಿಯಲ್ಲಿ ಒಳ್ಳೆ ಹೆಸರು ಮಾಡಲು ಬಹಳ ದಿನ ಬೇಕಾಗಲಿಲ್ಲ. ಶಿಕ್ಷಕರ ಶ್ರಮ, ದಾದಾಜಿಯವರ ನಂಬಿಕೆ, ಪ್ರಧಾನ ಕಾಯದರ್ಶಿಯವರಾದ ಶ್ರೀ ಶಿವಮೂರ್ತಿ ಕೀಲಾರರವರ ಭರವಸೆ ಹುಸಿಗೊಳ್ಳಲಿಲ್ಲ. ಇಂದು ಶ್ರೀಪತಿ ಶೈಕ್ಷಣಿಕವಾಗಿ ಮದ್ದೂರು ತಾಲ್ಲೂಕಿನಲ್ಲೇ ತನ್ನದೇ ಛಾಪು ಮೂಡಿಸಿದೆ. ಇಂದು ಸಾವಿರಾರು ಮಕ್ಕಳ ಉಜ್ವಲ ಭವಿಷ್ಯಕ್ಕೆ ಹಗಲಿರುಳು ಶ್ರಮಿಸುತ್ತಿದೆ. ಶಿಕ್ಷಣದ ಜೊತೆಗೆ ನೈತಿಕ ಮೌಲ್ಯ ಸಂಸ್ಕಾರಯುತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿದೆ. ಕ್ರೀಡೆ, ಧ್ಯಾನ, ಯೋಗ, ಕರಾಟೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಬಾಲ್ಯದಲ್ಲೇ ನೀರೆರೆದು ಪೋಷಿಸಲಾಗುತ್ತದೆ....

**"ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ**
**ಮಾ ಕರ್ಮಫಲ ಹೇತುರ್ಭರ್ಮಾತೇ ಸಂಗೋಸ್ತ್ವ ಕರ್ಮಣಿ"**

ಒಳ್ಳೆಯ ಕೆಲಸ ಮಾಡಪ್ಪ. ಒಳ್ಳೆಯ ಕರ್ಮಫಲ ಅನುಭವಿಸ್ತೀಯ ಎಂಬುದು ಈ ಶ್ಲೋಕದ ತಾತ್ಪರ್ಯ. ದಾದಾಜೀಯವರ ಅದಮ್ಯ ನಂಬಿಕೆಗೆ ಹಿಡಿದ ಕೈಗನ್ನಡಿ. ದಾದಾಜಿಯವರು ಸಂಸ್ಥೆಯನ್ನು ವಹಿಸಿಕೊಂಡಾಗ ಕಟ್ಟಡದ ಸಮಸ್ಯೆ ವಿಶಾಲವಾದ ಆಟದ ಮೈದಾನದ ಕೊರತೆ, ಶೌಚಾಲಯದ ಸಮಸ್ಯೆ ಇತ್ತು. ಶಿವಮೂರ್ತಿ ಕೀಲಾರರವರು ಸಂಸ್ಥೆಯನ್ನು ಮುನ್ನಡೆಸಿಕೊಂಡಾಗ ಮಹತ್ತರ ಬದಲಾವಣೆಯನ್ನು ಶ್ರೀಪತಿಯಲ್ಲಿ ಮಾಡಿ ಸುಮಾರು 2 ಕೋಟಿ ವೆಚ್ಚದಲ್ಲಿ ಶಾಲಾನೂತನ ಕಟ್ಟಡ, ಶೌಚಾಲಯದ ನಿರ್ಮಾಣ ವಿಶಾಲ

ವಾದ ಆಟದ ಮೈದಾನ, ವಿಜ್ಞಾನ ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್‌ನ ನಿರ್ಮಾಣ ಮಾಡಿ ಶ್ರೀಪತಿಯ ಸಂಪೂರ್ಣ ಚಿತ್ರಣವನ್ನೇ ಬದಲಾಯಿಸಿ ಗ್ರಾಮೀಣ ಭಾಗದಲ್ಲಿ ಮಾದರಿ ಸಂಸ್ಥೆಯಾಗಿ ಮಾಡಿದ್ದಾರೆ.

ಶ್ರೀಪತಿಯನ್ನು ತಪೋಭೂಮಿಯನ್ನಾಗಿ ಆಧ್ಯಾತ್ಮಿಕ ಕೇಂದ್ರವನ್ನಾಗಿ ಮಾಡಬೇಕೆಂಬ ಕನಸನ್ನು ಇಟ್ಟುಕೊಂಡಿದ್ದರು. ಮೂಡಲದೊಡ್ಡಿಯ ವಿದ್ಯಾನಿಕೇತನ ಶಾಲೆಯನ್ನು ಶ್ರೀಪತಿ ಎಂದೇ ಕರೆಯುತ್ತಿದ್ದರು.

ಸದ್ದುಗದ್ದಲ್ಲವಿಲ್ಲದ ಸಾಧನೆ ಇಲ್ಲಿ ಗದ್ದುಗೆಯೇರಿದೆ,

ಕಾಯಕವೇ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ".

ಹೀಗೆ ಯಾವುದೇ ಫಲಾಪೇಕ್ಷೆಯಿಲ್ಲದೆ, ಸದ್ದುಗದ್ದಲವಿಲ್ಲದೆ ಸ್ವಾಮೀಜಿಯವರು ಎಲ್ಲವನ್ನು ಸಾಧ್ಯವಾಗಿಸಿದ್ದಾರೆ. ಭೌತಿಕವಾಗಿ ಸ್ವಾಮೀಜಿ ಇಲ್ಲದಿದ್ದರೂ ಅವರ ಕನಸುಗಳನ್ನು ಸಾಕಾರಗೊಳಿಸುವ ಸಾಕಾರಮೂರ್ತಿಯಾಗಿ, ಸ್ವಾಮೀಜಿಯವರ ಶಿಷ್ಯರಾದ ಶಿವಮೂರ್ತಿ ಕೀಲಾರರವರು ಅಪ್ಪಟ ದೈವ ಭಕ್ತರು. ತಮ್ಮ ಆರಾಧ್ಯದೈವ ದಕ್ಷಿಣಮೂರ್ತಿ ಸಹಿತ ಮಹಾಗಣಪತಿಯ ದೇವಾಲಯವನ್ನು ಶ್ರೀಪತಿಯ ಆವರಣದಲ್ಲಿ ಸ್ಥಾಪಿಸಿದ್ದಾರೆ. ಸ್ವಾಮೀಜಿಯವರು ಶೈಕ್ಷಣಿಕವಾಗಿ ಶ್ರೀಪತಿಯ ಮೆರಗು ಹೆಚ್ಚಿಸಿದರೆ, ಶಿವಮೂರ್ತಿಯವರು ಧಾರ್ಮಿಕ ಹಾಗೂ ಸಮಾಜಮುಖಿ ಕೆಲಸಗಳಿಂದ ಹೊಸ ಮನ್ವಂತರಕ್ಕೆ ಕಾರಣೀಭೂತರಾಗಿದ್ದಾರೆ.

ಭಾರತೀಯ ಸನಾತನ ಧರ್ಮದಲ್ಲಿ ಗೋವುಗಳಿಗೆ ವಿಶಿಷ್ಟ ಸ್ಥಾನವಿದೆ. ಇಂದು ನಮ್ಮ ಅಪ್ಪಟ ದೇಶಿಯ ಗೋವಿನ ತಳಿಗಳು ಅವಸಾನದ ಅಂಚಿನಲ್ಲಿವೆ. ಅವುಗಳನ್ನು ಉಳಿಸುವ ಸಲುವಾಗಿ ಶ್ರೀಪತಿಯಲ್ಲಿ ಶಿವಮೂರ್ತಿರವರ "ಹಳ್ಳಿಕರ" ಫಾರಂನಲ್ಲಿ ಗೋಶಾಲೆಯನ್ನು ತೆರೆದು ವಿವಿಧ ದೇಶೀಯ ತಳಿಗಳ ಲಲನೆ ಪಾಲನೆಯನ್ನು ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೆ, ಗ್ರಾಮೀಣ ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ಉದ್ದೇಶದಿಂದ ಎಣ್ಣೆಗಾಣ, ಸ್ಥಾಪಿಸುವ ಮೂಲಕ ಸುತ್ತಮುತ್ತಲಿನ ಮಹಿಳೆಯರಿಗೆ ಉದ್ಯೋಗ ಸಲ್ಲಿಸಲಾಗಿದೆ.

ಒಟ್ಟಾರೆ, ಸ್ವಾಮೀಜಿಯವರು ಶ್ರೀಪತಿಗೆ ಉತ್ತಮ ಅಡಿಪಾಯ ಹಾಕಿಕೊಟ್ಟರೆ, ಶಿವಮೂರ್ತಿ ಕೀಲಾರರವರು ಅದಕ್ಕೆ ಆಧುನಿಕ ಸ್ಪರ್ಶ ನೀಡಿ ಮುಗಿಲೆತ್ತರಕ್ಕೆ ಕೊಂಡೊಯ್ಯುವ ಹಾದಿಯಲ್ಲಿ ಸಾಗುತ್ತಿದ್ದಾರೆ. ಸ್ವಾಮೀಜಿ ಕನಸಿನ ಗ್ರಾಮೀಣ ಶಿಕ್ಷಣ ಜತೆಗೆ ಮಹಿಳೆಯರು ಹಾಗೂ ಯುವ ಉದ್ಯೋಗವಕಾಶವನ್ನು ಕಲ್ಪಿಸಿ ನಿಜ ಅರ್ಥದಲ್ಲಿ ಗ್ರಾಮ ರಾಜ್ಯ ಸ್ಥಾಪನೆಗೆ ಶ್ರೀಪತಿಯ ಅಂಗಳ ಸಜ್ಜಾಗುತ್ತಿದೆ. ಇದು ಹೆಮ್ಮೆ, ಅಭಿಮಾನದ ಸಂಗತಿ.

ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ (ಶ್ರೀಪತಿ) ಶೈಕ್ಷಣಿಕವಾಗಿ ಇಂದು ತನ್ನದೇ ಆದ ಛಾಪನ್ನು ಮೂಡಿಸಿದೆ. 2002 ರಲ್ಲಿ ಕೆಲವೇ ಮಕ್ಕಳಿಂದ ಪ್ರಾರಂಭವಾದ ಶಾಲೆಯಲ್ಲಿ, ಇಂದು 600ಕ್ಕೂ ಹೆಚ್ಚು ಮಕ್ಕಳು ಇಲ್ಲಿ ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳುತ್ತಿದ್ದಾರೆ. ವಿಶಾಲವಾದ ಆಟದ ಮೈದಾನ, ಸುಸಜ್ಜಿತ ಕಟ್ಟಡ, ಪ್ರಯೋಗಾಲಯ ಶಾಲೆ, ಹೊಂದಿದ್ದು ಶಿಕ್ಷಣದಲ್ಲಿ ಗುರುಕುಲ ಮಾದರಿಯನ್ನು ಅಳವಡಿಸಿಕೊಂಡು ನುರಿತ ಶಿಕ್ಷಕರಿಂದ ಸ್ಮಾರ್ಟ್ ಕ್ಲಾಸ್ ಬೋಧನೆಯೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಯಲ್ಲಿ ಶೇಕಡ ನೂರರಷ್ಟು ಸಾಧನೆಯನ್ನು ನಮ್ಮ ಶಾಲೆಯು ಪಡೆಯುತ್ತಿದ್ದು, ತಾಲ್ಲಾಕಿನಲ್ಲೇ ಮುಂಚೂಣಿಯ ಸ್ಥಾನದಲ್ಲಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಪದವಿ ಪೂರ್ವ ಕಾಲೇಜು ಸಹ ಶ್ರೀಪತಿಯಲ್ಲಿ ಪ್ರಾರಂಭವಾಗುತ್ತಿರುವುದು ನಿಜಕ್ಕೂ ನಮ್ಮೆಲ್ಲರಿಗೂ ಸಂತಸದ ವಿಷಯವಾಗಿದೆ.

ಕೇವಲ ಶಿಕ್ಷಣ ಅಷ್ಟೇ ಅಲ್ಲದೆ ಕ್ರೀಡೆಗೂ ಅಷ್ಟೇ ಪ್ರಾಮುಖ್ಯತೆಯನ್ನು ನೀಡಲಾಗಿದ್ದು, ವಾಲಿಬಾಲ್, ಕಬ್ಬಡ್ಡಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಪ್ರಥಮ ಸ್ಥಾನವನ್ನು ನಿರಂತರವಾಗಿ ಗಳಿಸಿ ಶಾಲೆಯ ಕೀರ್ತಿಯನ್ನು ನಮ್ಮ ಮಕ್ಕಳು ಹೆಚ್ಚಿರುತ್ತಾರೆ. ಮಕ್ಕಳ ದೈಹಿಕ ಆರೋಗ್ಯವನ್ನು ಹೆಚ್ಚಿಸಲು ಕರಾಟೆಯನ್ನು ಸಹ ಕಲಿಸಲಾಗುತ್ತಿದೆ. ಹಾಗೂ ಕೌಶಲಗಳ ಅಭಿವೃದ್ಧಿಯನ್ನು ಹೆಚ್ಚಿಸಲು ಹಲವು ಚಟುವಟಿಕೆಗಳನ್ನು ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಮಾನಸಿಕ ಸದೃಢತೆಗಾಗಿ ಯೋಗ, ಧ್ಯಾನ, ಶ್ಲೋಕಗಳನ್ನು ಪರವಾಗಿ ಕಲಿಸಲಾಗುತ್ತಿದೆ ಇದರಿಂದ ಓದಿನಲ್ಲಿ ಏಕಾಗ್ರತೆ ಅಭ್ಯವಾಗಿ ಹೆಚ್ಚು ಅಂಕಗಳನ್ನು ಗಳಿಸಲು ಸಹಕಾರಿಯಾಗಿದೆ.

–ಹೀಗೆ ಶಿಕ್ಷಣ, ಕ್ರೀಡೆ, ಯೋಗ, ಧ್ಯಾನ, ಶ್ಲೋಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರವಾಗಿ ಶ್ರೀಪತಿಯು ನಡೆಸಿಕೊಂಡು ಬರುತ್ತಿದೆ.



**ಚೇತನ್ ದೊಡ್ಡಬಾಣಸವಾಡಿ**
ಕನ್ನಡ ಉಪನ್ಯಾಸಕರು, ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ,
ಶ್ರೀಪತಿ, ಮೂಡಲದೊಡ್ಡಿ

# ದಕ್ಷಿಣಾಮೂರ್ತಿ ಸಹಿತ ಮಹಾಗಣಪತಿ ದೇವಸ್ಥಾನದ ಪೂಜಾ ಕೈಂಕರ್ಯ

ದಕ್ಷಿಣಾಮೂರ್ತಿ ವಿದ್ಯೆಗೆ ಅಧಿಷ್ಠಾತ್ಮ ದೇವತೆ ಎಂದು ಉಪನಿಷತ್ತು ಮತ್ತು ಸ್ತೋತ್ರಗಳಿಂದ ತಿಳಿದುಬರುತ್ತದೆ. ದಕ್ಷಿಣಾಮೂರ್ತಿಯು ಪರಮೇಶ್ವರನ ಲೀಲಾ ವಿಭೂತಿಗಳಲ್ಲಿ ಒಂದು.

ದಕ್ಷಿಣಾ ಎಂದರೆ ಬುದ್ಧಿ. ಆ ಬುದ್ಧಿಯ ಜ್ಞಾನದ ಕಡೆಗೆ ಅಭಿಮುಖನಾಗಿರುವುದರಿಂದ ಈ ಹೆಸರು ಮಕ್ಕಳಲ್ಲಿ ಜ್ಞಾನ ವಾಕ್ಚಾತುರ್ಯ, ಸಿದ್ಧಿ ಲಭಿಸುತ್ತದೆ.. ಅತ್ಯಂತ ಸರಳ ಸ್ತೋತ್ರ ಪ್ರತಿದಿನ ಹನ್ನೊಂದು ಸಲ ಹೇಳಿಸಿ ನೋಡಿ...

ಸರ್ವ ವಿದ್ಯೆಗಳಿಗೆ ನಿಧಿ :

**ಗುರುವೇ ಸರ್ವಲೋಕಾನಾಂ ಭಿಷಜೇ ಭವರೋಗಿಣಾಂ।**
**ನಿಧಯೇ ಸರ್ವವಿದ್ಯಾನಾಂ ದಕ್ಷಿಣಾಮೂರ್ತಯೇ ನಮಃ॥**

ಅರ್ಥ:– ಸರ್ವಲೋಕಗಳಿಗೆ ಗುರುವೂ ಭವರೋಗಿಗಳಿಗೆ ವೈದ್ಯನೂ ಸರ್ವವಿದ್ಯಗಳಿಗೆ ನಿಧಿಯೂ ಆದ ದಕ್ಷಿಣಾಮೂರ್ತಿಗೆ ನಮಸ್ಕಾರ.

ಹೀಗೆಂದು ಈ ದೇವತೆಯನ್ನು ಪ್ರಾರ್ಥಿಸುವುದು ರೂಢಿಯಲ್ಲಿದೆ. ದಕ್ಷಿಣಾಮೂರ್ತಿ ವಿದ್ಯಗೆ ಅಧಿಷ್ಠಾತ್ಮ

ದೇವತೆ ಎಂದು ಉಪನಿಷತ್ತು ಮತ್ತು ಸ್ತೋತ್ರಗಳಿಂದ ತಿಳಿದು ಬರುತ್ತದೆ. ವ್ಯಾವಹಾರಿಕ ರೂಪದ ಉಪದೇಶ ಮಿಥ್ಯೆಯಾದ ಕಾರಣ ಜ್ಞಾನ(ಬ್ರಹ್ಮ) ಮೂರ್ತಿಯಾದ ಈ ದೇವತೆ ಮುಖದಿಂದ ಯಾವ ಉಪದೇಶವನ್ನೂ ಮಾಡುವುದಿಲ್ಲ. ಆದ ಕಾರಣ ಈ ಮೂರ್ತಿಯ ಗುರುರೂಪವಾದ ಉಪದೇಶ ಮೌನವಷ್ಟೇ. ಶಿಷ್ಯರು ಈ ಮುದ್ರಯಿಂದಲೇ ಸಂಶಯುಮುಕ್ತರಾಗಿ ಜ್ಞಾನಿಗಳಾಗುತ್ತಾರೆ. ಇತರ ದೇವತೆಗಳಿಗೆ ಪುರಾಣಪ್ರಸಿದ್ಧಿ ಇರುವಂತೆ ಈ ದೇವತೆಯ ವಿಚಾರ ಪುರಾಣಗಳಲ್ಲಿ ಅಧಿಕವಾಗಿ ಕಂಡುಬರುವುದಿಲ್ಲ. ಮಂತ್ರ ಶಾಸ್ತ್ರಕ್ಕೆ ಸಂಬಂಧಪಟ್ಟ ಉಪಾಸನಾದಿ ವಿಭಾಗದಲ್ಲಿ ಈ ದೇವತೆಯ ವಿಚಾರವಿದೆ. ಜ್ಞಾನವನ್ನು ಬಯಸುವವರು ಈ ದೇವತೆಯನ್ನು ಉಪಾಸನೆ ಮಾಡುತ್ತಾರೆ.

## ಧ್ಯಾನ ಕ್ರಮ

ಕರ್ಪೂರದಂತೆ ಶುಭ್ರನೂ ತರ್ಕಮುದ್ರೆಯನ್ನು ಧರಿಸಿ ಬ್ರಹ್ಮತತ್ತ್ವವನ್ನು ತಿಳಿಸುವವನೂ ಯೋಗಾಸನದಲ್ಲಿ ಮಂಡಿತನೂ ಆದ ದಕ್ಷಿಣಾಮೂರ್ತಿಯುನ್ನು ಧ್ಯಾನಿಸಬೇಕೆಂದು ಶ್ರೀ ಮಾನಸೋಲ್ಲಾಸ ಗ್ರಂಥ ಹೇಳುತ್ತದೆ.

ಬ್ರಹ್ಮತತ್ತ್ವವನ್ನು ಬಯಸುವ ವೃದ್ಧರಾದ ಋಷಿಗಳ ಗುಂಪಿಸಿಂದ ಆವೃತನಾದ ಜ್ಞಾನಮುದ್ರಯನ್ನು ಧರಿಸಿ ಆನಂದಮೂರ್ತಿಯೂ ಮೌನರೂಪ ವ್ಯಾಖ್ಯಾನದಿಂದ ಬ್ರಹ್ಮತತ್ತ್ವವನ್ನು ಪ್ರಕಟಿಸುತ್ತಿರುವ ತರುಣನೂ ಆದ ದಕ್ಷಿಣಾಮೂರ್ತಿಯನ್ನು ಸ್ಮರಿಸಬೇಕೆಂದು ಶ್ರೀತತ್ತ್ವಸುಧೆ ತಿಳಿಸುತ್ತದೆ.



## ಉಪನಿಷದ್ ವಾಕ್ಯ

ವೀಣೆ ಮತ್ತಿನ ಜಪಮಾಲೆ ಪುಸ್ತಕ ಜ್ಞಾನಮುದ್ರೆ ಅಥವಾ ಅಗ್ನಿನಾಗಗಳನ್ನು ಚತುರ್ಭುಜಗಳಲ್ಲಿ ಧರಿಸಿ ಬೆಳ್ಳಿಯಂತೆ ಶುಭ ವರ್ಣದಿಂದ ಕೂಡಿದ ಭಸ್ಮಲೇಪಿತ ಶರೀರವುಳ್ಳವನೂ ತ್ರಿಲೋಚನನೂ ತಲೆಯಲ್ಲಿ ಚಂದ್ರಕಲೆಯುಳ್ಳವನೂ ಕಿರೀಟಧಾರಿಯೂ ಯೋಗಾಸನರೂಢನೂ ಆಗಿರುವಂತೆ ಈ ದೇವತೆಯ ಸ್ವರೂಪ ದಕ್ಷಿಣಾ ಮೂರ್ತಿ ಉಪನಿಷತ್ತಿನಲ್ಲಿ ವರ್ಣಿತವಾಗಿದೆ.

ಜ್ಞಾನಾಧಿದೈವವಾದುದರಿಂದ ಮೇಧಾ ದಕ್ಷಿಣಮೂರ್ತಿ ಎಂಬ ಹೆಸರು ಮಂತ್ರೋದ್ಧಾರದಲ್ಲಿ ಕಂಡುಬರುತ್ತದೆ. ಪ್ರಳಯ ಕಾಲದಲ್ಲಿ ಎಲ್ಲವನ್ನೂ ತನ್ನಲ್ಲಿ ಸಂಹರಿಸಿಕೊಂಡು ಸ್ವಾತ್ಮಾನಂದ ಸುಖದಲ್ಲಿ ವಿಹರಿಸುವ ಈಶ್ವರನ ಸ್ವರೂಪವೇ

ದಕ್ಷಣಾಮೂರ್ತಿ. ಈ ದಕ್ಷಿಣ ಮುಖನಾದ ಶಿವ ಪ್ರತ್ಯಕ್ಷನಾದರೆ ತತ್ತ್ವಜ್ಞಾನ ಸಿಗುತ್ತದೆ.

ದಕ್ಷಿಣಾ ಮೂರ್ತಿಯು ಪರಮೇಶ್ವರನ ಲೀಲಾ ವಿಭೂತಿಗಳಲ್ಲಿ ಒಂದು. ವೀಣಾ, ಸಾಂಬ, ಯೋಗ, ಸಂಹಾರ, ಶಕ್ತಿ, ಜ್ಞಾನ, ಅನುಸ್ಠಾನ, ವ್ಯಾಖ್ಯಾನ, ವಿದ್ಯಾ, ವಟಮೂಲ ಎಂಬ ಹತ್ತು ವಿಧ ಶಿವಮೂರ್ತಿಗಳಲ್ಲಿ ಕೊನೆಯದೇ ಇದು. ದಕ್ಷಿಣಾಎಂದರೆ ಬುದ್ಧಿ. ಆ ಬುದ್ಧಿಯ(ಜ್ಞಾನದ) ಕಡೆಗೆ ಅಭುಮುಖನಾಗಿರುವುದರಿಂದ ಈ ಹೆಸರು. ಮುರ್ತಿ ದಕ್ಷಿಣಾಭಿಮುಖವಾಗಿ ಇರುವುದರಿಂದ ಈ ಹೆಸರು ಎಂದು ಕೆಲವರ ಅಭಿಪ್ರಾಯ.

ಈ ದೇವತೆಯನ್ನು ಪ್ರಾರ್ಥಿಸುವುದು ರೂಢಿಯಲ್ಲಿದೆ ದಕ್ಷಿಣಾಮೂರ್ತಿ ವಿದ್ಯೆಗೆ ಅಧಿಷ್ಠಾತ್ಮ ದೇವತೆ ಎಂದು ಉಪನಿಷತ್ತು ಮತ್ತು ಸ್ತೋತ್ರಗಳಿಂದ ತಿಳಿದು ಬರುತ್ತದೆ. ವ್ಯವಹಾರಿಕ ರೂಪದ ಉಪದೇಶ ವಿಥ್ಯೆಯಾದ ಕಾರಣ ಜ್ಞಾನ(ಬ್ರಹ್ಮ) ಮೂರ್ತಿಯಾದ ಈ ದೇವತೆ ಮುಖದಿಂದ ಯಾವ ಉಪದೇಶವನ್ನೂ ಮಾಡುವುದಿಲ್ಲ ಆದಕಾರಣ ಈ ಮೂರ್ತಿಯ ಗುರುರೂಪವಾದ ಉಪದೇಶ ಮೌನವಷ್ಟೇ. ಶಿಷ್ಯರು ಈ ಮುದ್ರಯಿಂದಲೇ ಸಂಶಯಮುಕ್ತರಾಗಿ ಜ್ಞಾನಿಗಳಾಗುತ್ತಾರೆ. ಇತರ ದೇವತೆಗಳಿಗೆ ಪುರಾಣ ಪ್ರಸಿದ್ಧಿ ಇರುವಂತೆ ಈ ದೇವತೆಯ ವಿಚಾರ ಪುರಾಣಗಳಲ್ಲಿ ಅಧಿಕವಾಗಿ ಕಂಡುಬರುವುದಿಲ್ಲ. ಮಂತ್ರ ಶಾಸ್ತ್ರಕ್ಕೆ ಸಂಬಂಧಪಟ್ಟ ಉಪಾಸನಾದಿ ವಿಭಾಗಗಳಲ್ಲಿ ಈ ದೇವತೆಯ ವಿಚಾರವಿದೆ. ಜ್ಞಾನವನ್ನು ಬಯಸುವವರು ಈ ದೇವತೆಯನ್ನು ಉಪಾಸನೆ ಮಾಡುತ್ತಾರೆ.

ಅನೇಕ ಮರಗಳ ನೆರಳುಗಳಿಂದ ಬಿಸಿಲಿಲ್ಲದೆ ತಂಪಾದ ಗಿರಿತೊರೆಗಳಿಂದ ಕೂಡಿರುವ ಲತಾಪುಷ್ಪ ಸಮೃದ್ಧವಾದ ದುಂಬಿಗಳ ಝೇಂಕಾರ ನವಿಲುಗಳ ನರ್ತನ ಕೋಗಿಲೆಗಳ ಇಂಪಾದ ಧ್ವನಿ, ಹಾವು – ಮುಂಗುಸಿ, ಹಸು ಹುಲಿ ಮೊದಲಾದ ವೈರ ಪ್ರಾಣಿಗಳೂ ತಮ್ಮ ವೈರವನ್ನು ಮರೆತು ವಿಹರಿಸುತ್ತಿರುವ ಶುಕನೇ ಮೊದಲಾದ ಮುನಿಗಳು ಮತ್ತು ಇಂದ್ರಾದಿ ದೇವತೆಗಳಿಂದ ಸೇವಿತರಾದ ಸಿದ್ಧ ಕಿನ್ನರರ ವಾಸ ಸ್ಥಳವಾದ ಮೇರು ಪರ್ವತ ಪ್ರದೇಶದಲ್ಲಿ ಗರುಡ ಶಿಲೆಯ ಎಲೆಗಳು ಪದ್ಮರಾಗದ ಹಣ್ಣುಗಳು ನವರತ್ನದ ಬಿಳಿಲುಗಳು ಹಾಗೂ ಸುಗಂಧವನ್ನು ಬೀರುವ ಹೋಗಳಿಂದ ಕೂಡಿದ ಎತ್ತರವಾದ ಒಂದು ಆಲದ ಮರವಿದೆ. ಆ ಮರದ ಕೆಳಗೆ ರತ್ನಸಿಂಹಾಸನದ ಮೆಲೆ ಶರತ್ಕಾಲದ ಚಂದ್ರ ಕಾಂತಿಯನ್ನು ಬೀರುವ ಮುಖದಿಂದ ಕೋಡಿದ ದಕ್ಷಿಣಾಮೂರ್ತಿ ಮುಂಡಿಸಿದ್ದಾನೆ. ಮುನಿಗಳ ಗುಂಪು ಈತನನ್ನು ಯಾವಾಗಲೂ ಸ್ತುತಿಸುತ್ತಿದ್ದಾರೆ. ಈ ಸ್ವರೂಪದಿಂದ ಜಗತ್ತಿಗೇ ಮೊದಲಿಗನಾದ ದಕ್ಷಿಣಾ ಮೂರ್ತಿಯನ್ನು ಸ್ಮರಿಸಬೇಕು ಎಂದು ಶಾರದಾ ತಿಲಕದಲ್ಲಿ ಹೇಳಿದೆ.

**ನ ಚೋರಹಾರ್ಯಂ ನ ಚ ರಾಜಹಾರ್ಯಂ ನ**
**ಬ್ರಾತೃಭಾಜ್ಯಮ್‌ನ ಚ. ಭಾರಕಾರೀ**
**ವ್ಯಯೇ ಕೃತೇ ವರ್ಧತ ಏವ ನಿತ್ಯಂ ವಿದ್ಯಾಧನಂ**
**ಅರ್ವಧನ ಪ್ರಧಾನಮ್ .**

ಎಂಬ ಈ ಶ್ಲೋಕದ ತಾತ್ಪರ್ಯ ಜ್ಞಾನದ ಸಂಪತ್ತು ಎಲ್ಲಾ ಸಂಪತ್ತುಗಳಲ್ಲಿ ಅತ್ಯಂತ ದೊಡ್ಡದು. ಈ ವಿದ್ಯಗೆ ಬೆಲೆಕಟ್ಟಲಾಗದು. ಈ ವಿದ್ಯೆಯಅಧಿದೇವತೆ ದಕ್ಷಿಣಾ ಮೂರ್ತಿ ಯಾಗಿದ್ದು ವಿದ್ಯಾ ಸಿದ್ಧತೆಗಾಗಿ ಶ್ರೀ ದಕ್ಷಣಾ ಮೂರ್ತಿಯನ್ನು ಈ ಕೆಳಗಿನ ಮಂತ್ರಗಳೊಂದಿಗೆ ಪಠಿಸುವುದು ಹೆಚ್ಚು ಶುಭಕರವಾಗಿದ್ದು ಮೂಡಲದೊಡ್ಡಿಯ ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ ಶಾಲಾ ಆವರಣದಲ್ಲಿ ಶ್ರೀ ದಕ್ಷಿಣಾ ಮೂರ್ತಿ ಸಮೇತ ಮಹಾ ಗಣಪತಿ ದೇವಸ್ಥಾನವಿದ್ದು ಸುತ್ತ ಮುತ್ತಲಿನ ಹತ್ತಕ್ಕೂ ಹೆಚ್ಚು ಗ್ರಾಮದ ಭಕ್ತಾಧಿಗಳು ಪ್ರತೀ ಗುರುವಾರ ಬೆಳಿಗ್ಗೆ ಅಥವಾ ಸಂಜೆ ದೇವಸ್ಥಾನಕ್ಕೆ ಆಗಮಿಸಿ ಅರ್ಚಕರಾದ ಶ್ರೀ ದಿನೇಶ್ ದೀಕ್ಷಿತ್ ಅವರ ಮಾರ್ಗದರ್ಶನದಲ್ಲಿ ಅನೇಕ ಪೂಜಾ ಕೈಂಕರ್ಯಗಳನ್ನು ಪ್ರತೀ ದಿನ ನಡೆಸುತ್ತಿದ್ದು ವಿಶೇಷವಾಗಿ ಪ್ರತೀ ಗುರುವಾರ ದಕ್ಷಣಾ ಮೂರ್ತಿ ಅವರಿಗೆ ನೆನೆಸಿದ ಕಡಲೆ ಕಾಳಿನ ಹಾರವನ್ನು ಸ್ವಾಮಿ ಪೀಠಕ್ಕೆ ಅರ್ಪಿಸಿ ಹತ್ತು ನಿಮಿಷ ಧ್ಯಾನ ಮಾಡಿ ಭಕ್ತಾಧಿಗಳಿಗೆ ಇಷ್ಟಾರ್ಥಗಳನ್ನು ಸಿದ್ಧಿಸಿಕೊಂಡಿದ್ದು ಅಪಾರ ಭಕ್ತಾಧಿಗಳನನ್ನು ದೇವಸ್ಥಾನ ಹೊಂದಿದೆ. ಅದರಲ್ಲೂ ವಿದ್ಯಾ ಜ್ಞಾನ ಉನ್ನತಿಗಾಗಿ ಮತ್ತು ಮದುವೆಯ ಸಮಸ್ಯೆಗಳಿಗೆ ಪ್ರತೀ ಗುರುವಾರ ಐದು ವಾರಗಳು ಕಡಲೆಕಾಳಿನ ಹಾರವನ್ನು ಅರ್ಪಿಸಿ ದಕ್ಷಿಣಾ ಮೂರ್ತಿಯವರ ಕೃಪಾ ಆಶೀರ್ವಾದದಿಂದ ಫಲವನ್ನು ಪಡೆಯುತ್ತಿದ್ದಾರ



**ದಿನೇಶ್ ದೀಕ್ಷಿತ್ ಬಿ**
ದಾರ್ಶನಿಕ ಆಗಮಿಕರು,
ದಕ್ಷಿಣ ಮೂರ್ತಿ ಸಮೇತ
ಮಹಾ ಗಣಪತಿ ದೇವಸ್ಥಾನ
ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ
ಸ್ಕೂಲ್ (ಶ್ರೀಪತಿ)
ಮೂಡಲದೊಡ್ಡಿ.

# ದಿನಕ್ಕೊಂದು ಕಥೆ

ತುಂಬು ಗರ್ಭಿಣಿಯೊಬ್ಬಳು ಹೆರಿಗೆ ನೋವಿಂದ ರಸ್ತೆಯಲ್ಲಿ ಸಹಾಯಕ್ಕಾಗಿ ಅಂಗಲಾಚುತ್ತಿರುತ್ತಾಳೆ. ಕಾರಿನಲ್ಲಿ ಬಂದ ಯುವಕನೊಬ್ಬ ನೋಡಿಯೂ ನೋಡದಂತೆ ಕಾರನ್ನು ಮುಂದೆ ಚಲಾಯಿಸುತ್ತಾನೆ. ಅವನ ಕಾರಿನ ಹಿಂದೆ ಮಾತೃ ದೇವೋಭವ ಎಂದು ಬರೆದಿರುತ್ತದೆ.

ಮತ್ತೆ ಅದೇ ರಸ್ತೆಯಲ್ಲಿ ಆಟೋ ಒಂದು ಬರುತ್ತದೆ, ಸಹಾಯಕ್ಕಾಗಿ ಆ ಹೆಣ್ಣು ಮಗಳು ಅಂಗಲಾಚುತ್ತಾಳೆ. ಆಕೆಯೊಂದಿಗೆ ಯಾರು ಇಲ್ಲವೆಂದು ಗಮನಿಸಿ ನನಗ್ಯಾಕಿ ಉಸಾಬರಿ ಎಂಬಂತೆ ಆಟೋ ಡ್ರೈವರ್ ಹೊರಟು ಹೋಗುತ್ತಾನೆ. ಗರ್ಭಿಣಿಯರಿಗೆ ಉಚಿತ ಸೇವೆ ಎಂದು ಆಟೋ ಹಿಂದೆ ಹೀಗೆಂದು ಬರೆದಿತ್ತು. ಹೀಗೆ ಹಲವರು ನೋಡಿಯೂ ನೋಡದಂತೆ ಹೊರಟು ಹೋಗುತ್ತಾರೆ. ಒಬ್ಬೊಬ್ಬರ ವಾಹನಗಳ ಹಿಂದೆಯೂ ದೊಡ್ಡ ದೊಡ್ಡ ಸಾಲುಗಳು, ತಾಯಿಯೇ ದೇವರು, ತಾಯಿಗಿಂತ ದೇವರಿಲ್ಲ, ಹೆಣ್ಣನ್ನು ರಕ್ಷಿಸಿ: ಹೆಣ್ಣನ್ನು ಗೌರವಿಸಿ, ಹೆಣ್ಣೇ ಸಂಸಾರದ ಕಣ್ಣು, ಇತ್ಯಾದಿ ಬೋಧನೆಗಳು.

ಸ್ವಲ್ಪ ಹೊತ್ತಿನ ನಂತರ ನಾಲ್ಕೈದು ಯುವಕರು ಬೈಕುಗಳಲ್ಲಿ ಗುಂಪಾಗಿ ಕೋಗಾಡುತ್ತಾ ಬರುತ್ತಾರೆ. ಆ ಗರ್ಭಿಣಿ ಹೆಣ್ಣು ಸಹಾಯಕ್ಕಾಗಿ ಒದ್ದಾಡುತ್ತಿರುವುದು ಕಂಡ ಯುವಕರು ಆಕೆಯನ್ನು ಹೇಗೋ ಆಸ್ಪತ್ರೆ ತಲುಪಿಸುತ್ತಾರೆ. ಆಗ ಆಕೆ ಆ ಯುವಕರಿಗೆ ಕೃತಜ್ಞತೆಯಿಂದ ಕೈ ಮುಗಿಯುತ್ತಾಳೆ. ತಮಾಷೆ ಅಂದ್ರೆ ಆ ಯುವಕರು ಬೈಕುಗಳ ಹಿಂದೆ ಬ್ಯಾಡ್ ಬಾಯ್ಸ್ ಎಂದು ಬರೆದಿತ್ತು.

ಕಥೆಯ ನೀತಿ ಇಷ್ಟೇ ದೊಡ್ಡ ದೊಡ್ಡ ಮಾತುಗಳನ್ನಾಡುವುದರಿಂದ, ಬೋಧಿಸುವುದರಿಂದ ದೊಡ್ಡ ವ್ಯಕ್ತಿಗಳಾಗೋದಿಲ್ಲ. ಒಳ್ಳೊಳ್ಳೆ ಸಂದೇಶಗಳು ವಾಹನಗಳ ಮೇಲೆ ಬರೆಸಿದ ಮಾತ್ರಕ್ಕೆ ಒಳ್ಳೆಯವರಾಗೋಲ್ಲ. ಅವಶ್ಯಕತೆಯಿರುವವರಿಗೆ ಅಗತ್ಯ ಸಮಯದಲ್ಲಿ ಮಾಡುವ ಸಣ್ಣ–ಪುಟ್ಟ ಸಹಾಯಗಳು ಪರಮ ಶ್ರೇಷ್ಠವಾಗುತ್ತವೆ.

ಸಂಗ್ರಹ : **ಶ್ರೀ ಮಲ್ಲಿಕಾರ್ಜುನ**
ಬಿರಾದಾರ ಸೊನ್ನ ತಾ. ಜೇವರ್ಗಿ

# ಗೆಳೆತನವೆಂಬ ಸಂಬಂಧಗಳ ನಡುವೆ ಒಂದು ಸುತ್ತು

ಕಲ್ಲು ಮಣ್ಣು ಕಡ್ಡಿ ಬೊಂಬೆ ಚಾಕಲೇಟುಗಳಿಗೆ ಜಗಳವಾಡುತ್ತಾ ಸ್ವಲ್ಪ ಮುನಿಸು, ತುಸು ಪ್ರೀತಿಗಳ ತಾತ್ಕಾಲಿಕ ಭಾವನೆಗಳಿಂದ ಸ್ನೇಹದ ಮೊದಲ ಆಟ ಪ್ರಾರಂಭವಾಗುತ್ತದೆ...

ಅಕ್ಕ ಪಕ್ಕದ ಮನೆಯ ಸಹಪಾಠಿಗಳು, ಶಿಶು ವಿಹಾರದಿಂದ ಕಾಲೇಜುಗಳವರೆಗೂ ದಂಡಿಯಾಗಿ ಗೆಳೆಯರ ಗುಂಪುಗಳು ಜೊತೆಯಾಗುತ್ತದೆ...

ಸಮಾರಂಭಗಳಲ್ಲಿ,ಬಸ್ಸು ರೈಲು ವಿಮಾನಗಳ ಪ್ರಯಾಣದಲ್ಲಿ, ದೇವಸ್ಥಾನ ಹೋಟೆಲು ಪಾರ್ಕುಗಳಲ್ಲಿ, ಸಂಘಸಂಸ್ಥೆಗಳ ಚಟುವಟಿಕೆಗಳಲ್ಲಿ, ಚಳುವಳಿ ಹೋರಾಟದ ಸಮಯದಲ್ಲಿ, ಉದ್ಯೋಗ ವ್ಯವಹಾರಗಳ ಸ್ಥಳಗಳಲ್ಲಿ, ಜೈಲು, ಆಸ್ಪತ್ರೆ, ಆಶ್ರಮ ಕಛೇರಿಗಳಲ್ಲಿ, ಹೀಗೆ ಎಲ್ಲೆಂದರಲ್ಲಿ ಸ್ನೇಹ ಬೆಳೆಯಬಹುದು.

ಆದರೆ ಸಮೂಹ ಸಂಪರ್ಕ ಮಾಧ್ಯಮಗಳ ಬೆಳವಣಿಗೆಯೊಂದಿಗೆ ಗೆಳೆತನ ಹೊಸ ಅರ್ಥವನ್ನು ಮತ್ತು ಹೊಸ ರೂಪವನ್ನು ಪಡೆದುಕೊಂಡಿತು.

ಬುಡಮೇಲಾಗಿ ಒಬ್ಬರಿಗೊಬ್ಬರು ಮುಖತಃ ಭೇಟಿಯಾಗದೆಯೂ ಸಹ ಗೆಳೆತನ ಮಾಡಬಹುದು ಎಂಬ ಸಾಧ್ಯತೆಯನ್ನು ಸೋಷಿಯಲ್ ಮೀಡಿಯಾಗಳು ತೋರಿಸಿಕೊಟ್ಟಿವೆ...

ಹಾಗಾದರೆ ಗೆಳೆತನ ಆಳ–ಅಗಲ, ಜೊಳ್ಳು–ಗಟ್ಟಿತನ, ಸಹಜ–ಮುಖವಾಡ, ನಿಸ್ವಾರ್ಥ– ಕೃತಕ ಇತ್ಯಾದಿ ಭಾವಗಳನ್ನು ಅಳೆಯುವುದಾದರೂ ಹೇಗೆ?

ಇದು ಅನುಭವ – ಅರಿವು – ಅಕ್ಷರ – ಭಾವನೆ – ನಂಬಿಕೆ – ವೈಚಾರಿಕತೆಗೂ ನಿಲುಕದಷ್ಟು ವಿಸ್ತಾರವನ್ನು ಹೊಂದಿದೆ. ಇದು ಹೀಗೆ ಎಂದು ನಿರ್ಧರಿಸಲು ಸಾಧ್ಯವೇ ಇಲ್ಲ. ಕೇವಲ ನಮ್ಮ ಜ್ಞಾನದ ಮಿತಿಯಲ್ಲಿ ಒಂದು ಅಭಿಪ್ರಾಯ ಅನಿಸಿಕೆ ವ್ಯಕ್ತಪಡಿಸಬಹುದಷ್ಟೆ.

ಯೌವನದ ದಿನಗಳವರೆಗೂ ಸಾಮಾನ್ಯ ಸ್ಥಿತಿಯಲ್ಲಿ ಸ್ನೇಹ ಉತ್ತಮ ಬಾಂಧವ್ಯವನ್ನು ಹೊಂದಿರುತ್ತದೆ. ಕಷ್ಟ ಸುಖಗಳಿಗೆ ಒಂದಷ್ಟು ಸ್ಪಂದನೆ ಇರುತ್ತದೆ.

ಯೌವ್ವನದ ದಿನಗಳನ್ನು ದಾಟಿ ಉದ್ಯೋಗ ಸಂಘಟನೆ ವಿವಾಹ ವ್ಯವಹಾರ ಮುಂತಾದ ಬದುಕಿನ ಮುಂದಿನ ಪಯಣದಲ್ಲಿ ಸ್ನೇಹ ಬಹಳಷ್ಟು ಶಿಥಿಲವಾಗುತ್ತಾ ಸಾಗುತ್ತದೆ.

*11ನೇ ಪುಟಕ್ಕೆ....*

# ಮರಳಿ ಬಾ ಶಾಲೆಗೆ

**"ಅಸತೋಮ ಸದ್ಗಮಯ**
**ತಮಸೋಮ ಜ್ಯೋತಿರ್ಗಮಯ"**

ಎಂಬ ಶ್ಲೋಕವೇ ಹೇಳುವಂತೆ ಅಜ್ಞಾನವೆಂಬ ಕತ್ತಲಿನಿಂದ ಜ್ಞಾನ ಎಂಬ ಬೆಳಕಿನೆಡೆಗೆ ಸಾಗುವುದಾಗಿದೆ. ಇಂತಹ ಕಾರ್ಯವನ್ನು ಮಾಡುವುದರಲ್ಲಿ ಶಾಲೆಯು ಪ್ರಧಾನ ಪಾತ್ರವನ್ನು ವಹಿಸುತ್ತದೆ.

ಬೇಸಿಗೆ ರಜೆಯಲ್ಲಿ ಕುಣಿದು ಕುಪ್ಪಳಿಸಿದ ಮಕ್ಕಳನ್ನು ನಮ್ಮ ಶಾಲೆಯು 'ಮರಳಿ ಬಾ ಶಾಲೆಗೆ' ಎಂಬ ಅಡಿ ಬರಹದ ಮೂಲಕ ಮೇ 24 ರಂದು ಮಕ್ಕಳಿಗೆ ಸಿಹಿಯನ್ನು ವಿತರಣೆ ಮಾಡುವುದರ ಮೂಲಕ ಶಾಲೆಯನ್ನು ಪುನರ್ ಆರಂಭ ಮಾಡಲಾಯಿತು.

ಸ್ನೇಹ ಎಂಬುದು ಅಗಾಧವಾದುದು ಈ ಅಗಾಧತೆಗೆ ಮತ್ತಷ್ಟು ಕಳೆಕೊಟ್ಟಿದ್ದು ಎಂದರೆ ನಮ್ಮ ಶಾಲೆಗೆ ಹೊಸದಾಗಿ ಸೇರ್ಪಡೆಯಾದ ವಿದ್ಯಾರ್ಥಿಗಳದ್ದು ಈ ವಿದ್ಯಾರ್ಥಿಗಳನ್ನು ಹಳೆಯ ವಿದ್ಯಾರ್ಥಿಗಳೊಂದಿಗೆ ಪರಿಚಯ ಮಾಡಿಸಿ ಕೊಡಲಾಯಿತು. ಈ ಅದ್ಭುತ ಕ್ಷಣವನ್ನು " ಸ್ನೇಹ ಸಂಗಮ" ಎಂದರೆ ಅತಿಶಯೋಕ್ತಿಯಾಗಲಾರದು.

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶಾಲಾ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಹೊಸ ಬಗೆಯ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ವಿದ್ಯಾರ್ಥಿಗಳಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ತರುವ ಉದ್ದೇಶದಿಂದ ನವೀನ ಮಾದರಿಯ project Based ಪಾಠವನ್ನು ನಮ್ಮ ಶಾಲೆಯಲ್ಲಿ ಮಾಡಲಾಗುತ್ತಿದೆ.

ಇದಕ್ಕೆ ಪೂರಕವಾಗುವಂತೆ " ಹಸಿರೇ ಉಸಿರು' ಎಂಬಂತೆ ಜೂನ್ 5 ರಂದು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಮ್ಮ ಶಾಲೆಯುಲ್ಲಿ ಹಲವು ಬಗೆಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಅದರಲ್ಲಿ ಪ್ರಮುಖವಾಗಿ ಹಾಡು, ಕಿರುನಾಟಕ , ಕಿರುಭಾಷಣಗಳು ಎಲ್ಲರ ಗಮನ ಸೆಳೆಯಿತು. ಹಾಗೂ ಶಿಕ್ಷಕರ ಮಾರ್ಗದರ್ಶನ ಮತ್ತು ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯಿಂದ ಪರಿಸರದ ಬಗ್ಗೆ ಅರಿವು ಮೂಡಿಸುವಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಯಿತು.

ಯೋಗವಿದ್ದರೆ ಬಾಳಲ್ಲಿ ಆರೋಗ್ಯವಿರುವುದು ಜೊತೆಯಲ್ಲಿ ಎನ್ನುವಂತೆ ಜೂನ್ 21 ರಂದು ನಮ್ಮ ಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆಯನ್ನನು ಆಚರಿಸ ಲಾಯಿತು. ಮೋದಿಯವರ ಯೋಗಭ್ಯಾಸದ ಪ್ರೇರಣೆ ಪಡೆದು "ಸಧೃಡ ಮನಸು ಸಧೃಡ ಕಾಯ" ಎಂಬ ಅಡಿಬರಹದ ನಿಟ್ಟಿನಲ್ಲಿ ನಮ್ಮ ಶಾಲೆಯಲ್ಲಿ ಪ್ರತಿನಿತ್ಯವು ಮಕ್ಕಳಿಂದ ಯೋಗಾಭ್ಯಾಸವನ್ನು ಮಾಡಿಸಲಾಗುತ್ತಿದೆ. ಯೋಗವು ಆರೋಗ್ಯಕರ ಜೀವನ ಶೈಲಿಯನ್ನು & ಶಾಶ್ವತವಾಗಿ ಉತ್ತಮ ಜೀವನವನ್ನು ನಡೆಸಲು ಸಹಾಯ ಮಾಡುತ್ತದೆ.

ಇದೇ ರೀತಿ ನಮ್ಮ ಶಾಲೆಯು ಇನ್ನಷ್ಟು ಅಭಿವೃದ್ಧಿ ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುವಂತಾಗಲಿ ಎಂಬುದು ನನ್ನ ಆಶಯವಾಗಿದೆ.



**ಸಂಯುಕ್ತ ಕೆ.**
ಸಹ ಶಿಕ್ಷಕಿ, ಅಭಿನವ
ಭಾರತಿ ವಿದ್ಯಾ ಕೇಂದ,
ಪ್ರಾಥಮಿಕ ಶಾಲೆ, ಮಂಡ್ಯ.

# ಗೆಳೆತನವೆಂಬ...

*...10ನೇ ಪುಟದಿಂದ*

ನೀನು ಮೊದಲು ಎಂಬ ಭಾವ ಹಿನ್ನೆಲೆಗೆ ಸರಿದು ನಾನು ಮೊದಲು ಎಂಬ ಭಾವ ಮುನ್ನಲೆಗೆ ಬರುತ್ತದೆ.

ಇದು ಭಾರತೀಯ ಸಮಾಜದ ಸಹಜ ನಡವಳಿಕೆ.

ಗೆಳೆತನದ ಗಾಢತೆ ಮತ್ತು ಆಪ್ತತೆಯುನ್ನು ಅರಿಯುವುದು ಒಂದು ದೊಡ್ಡ ಸವಾಲು.

ನನ್ನ ವೈಯಕ್ತಿಕ ಅನುಭವದ ಆಧಾರದಲ್ಲಿ...

ಗೆಳೆತನದ ಅವಧಿ ಕನಿಷ್ಠವೆಂದರೂ 4/5 ವರ್ಷಗಳಷ್ಟು ದೀರ್ಘಕಾಲ ತನ್ನ ಸಹಜತೆಯನ್ನು ಕಾಪಾಡಿಕೊಂಡಿರ ಬೇಕು.

ಗೆಳೆತನ ಪರಿಚಯದ ಹಂತವನ್ನೂ ಮೀರಿ ತನ್ನ ಕೊಡು ಕೊಳ್ಳುವಿಕೆಯಲ್ಲಿ ಆಪ್ತತೆ ಹೊಂದಿರಬೇಕು

ಗೆಳೆತನ ಪ್ರೀತಿಯಷ್ಟು ಗಾಢವಲ್ಲದಿದ್ದರೂ ನಮ್ಮ ಇಲ್ಲದಿರುವಿಕೆಯ ಸಮಯದಲ್ಲೂ ಸದಾ ನಮ್ಮನ್ನು ಕಾಡುತ್ತಲೇ ಇರಬೇಕು.

ಗೆಳೆತನ ಅನೇಕ ಅಗ್ನಿ ಪರೀಕ್ಷೆಗಳನ್ನು ದಾಟಿಯೂ ಅದೇ ಸ್ಪಂದನೆ ಉಳಿಸಿಕೊಂಡಿರಬೇಕು.

**–ಸಂಗ್ರಹ**

# ನಗಲು ಬಿಗುಮಾನವೇಕೆ..?

ಮನುಷ್ಯನ ಭಾವನಾತ್ಮಕ ಗುಣವು 'ನವರಸ'ಗಳೆಂಬ ಅಂಶ ಗಳಿಂದ ಕೂಡಿರುವುದಾಗಿದೆ ಇದರಲ್ಲಿ 'ಹಾಸ್ಯರಸವು' ಮನುಷ್ಯನಿಗೆ ತುಂಬಾ ಪ್ರಯೋಜನಕಾರಿ ಇಲ್ಲಿ ಹಾಸ್ಯ ವೆಂಬುದು ಮುಖದಲ್ಲಿ ನಗು ಮೂಡಿಸಿ ಹೃದಯವನ್ನು ಹಗುರಗೊಳಿಸುವ ಸಾಧನವಾಗಿದೆ. ಇಂತಹ ಒಂದು ನಗುವನ್ನು ಹೊದ್ದ ಮುಖವು ಹುಣ್ಣಿಮೆಯ ಚಂದ್ರನಂತೆ ಎಲ್ಲರನ್ನು ಆಕರ್ಷಿಸುತ್ತದೆ ಇತ್ತೀಚಿನ ನಮ್ಮ ಒತ್ತಡದ ಜೀವನದಲ್ಲಿ ಮನಸ್ಸು ಹಾಗೂ ದೇಹಕ್ಕೆ ವಿಶ್ರಾಂತಿಯೇ ಇಲ್ಲದಂತಾಗಿದೆ ಯಾವಾಗ, ಎಲ್ಲಿ ನೋಡಿದರೂ ಆತುರ, ಅವಸರಗಳು, ತುರ್ತು ಕೆಲಸಗಳು, ನಮ್ಮ ಬೆನ್ನೇರಿ ಕುಳಿತಿವೆ. ಸರಿಯಾಗಿ ಕೂತು ಊಟ ಮಾಡಲು, ಹಾಯಾಗಿ ಮಲಗಿ ನಿದ್ದೆ ಮಾಡಲು, ಕೂಡ ಮನುಷ್ಯನಿಗೆ ಆಗುತ್ತಿಲ್ಲ ನಾಳೆ ಏನು ಎಂಬ ಆಲೋಚನಾ ಕಾರಾಗೃಹದಲ್ಲಿಯೇ ನಾವು ದಿನ ಕಳೆಯುವುದಾಗಿದೆ. ಅದಕ್ಕಾಗಿ ಆಧುನಿಕ ಜೀವನ ಶೈಲಿಯಲ್ಲಿ ನಮಗೆ ರಕ್ತದಒತ್ತಡ,ಸಕ್ಕರೆ ಕಾಯಿಲೆ,ಹಾಗೂ ಹೃದಯ ಸಂಬಂಧಿ ಕಾಯಿಲೆಯಂತಹ ರೋಗಗಳು ಸರ್ವೇಸಾಮಾನ್ಯ ವಾಗಿದೆ. ಆದ್ದರಿಂದ ನಮ್ಮ ಈ ಒತ್ತಡದ ಜೀವನದಲ್ಲೂ ಕೊಂಚ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯದ ಕಡೆಗೆ ನಾವು ಗಮನಹರಿಸಬೇಕಾಗಿದೆ.ವರಕವಿ ಬೇಂದ್ರೆಯವರು ತಮ್ಮ ಒಂದು ಕವಿತೆಯಲ್ಲಿ ಈ ರೀತಿ ಹೇಳಿದ್ದಾರೆ ""ನಗರೋ ನಗರೀ

**ನಗ್ತಾ ನಗ್ತಾ ಸತ್ರೆ**
**ನಕ್ಷತ್ರ ಆಗ್ತೀರಿ...!**

ಅಂತ ನಗುವಿನ ಮಹತ್ವ ತಿಳಿಸಿದ್ದಾರೆ.

ಇತ್ತೀಚಿಗೆ ನಾವು ನೈಸರ್ಗಿಕವಾಗಿ ನಗುವುದನ್ನು ತೊರೆದು Laughing therapy (ನಗುವ ಚಿಕಿತ್ಸೆ)ಯ ಕೇಂದ್ರಕ್ಕೆ ಸೇರಿ ಕೃತಕವಾಗಿ ನಗುವ ಚಿಕಿತ್ಸೆಯನ್ನು ಪಡೆಯುತ್ತೇವೆ. ಇದರಿಂದ ಕ್ಷಣಿಕ ಲಾಭವಾದರೂ ನೈಸರ್ಗಿಕ ನಗುವಿನಷ್ಟು ಪರಿಣಾಮ ಕಾರಿಯಾಗಿರುವುದಿಲ್ಲ. ಆದ್ದರಿಂದ ನಾವು ಒಡನಾಡಿಗಳ ಜೊತೆ ಹೆಚ್ಚು ಸಮಯವನ್ನು ಕಳೆಯಬೇಕು ಉತ್ಸವ, ಜಾತ್ರೆ, ಹಬ್ಬ ಹರಿದಿನಗಳಂತಹ ಆಚರಣೆಗಳನ್ನು ಸಂಬಂಧಿಕರ ಜೊತೆಗೂಡಿ ಆಚರಿಸಬೇಕು. ಆದಷ್ಟು ಏಕಾಂಗಿ ಬದುಕಿನಿಂದ ದೂರವಿರಬೇಕು ಉಚಿತ ಗಾಂಭೀರ್ಯವಿರಲಿ ಆದರೆ ಪ್ರತಿಕ್ಷಣವೂ ಗಾಂಭೀರ್ಯದಿಂದ ಕೂಡಿರದಂತೆ ನೋಡಿಕೊಳ್ಳಿ ಏಕಾಂತ ಸಮಯದಲ್ಲಿ ನಿಮ್ಮ ಬಾಲ್ಯ ಸ್ನೇಹಿತ ರನ್ನು ಭೇಟಿಯಾಗಿ ಅಥವಾ ಫೋನಾಯಿಸಿ ಮಾತಾಡಿ ಇದರಿಂದ ಬಾಲ್ಯದ ತುಂಟಾಟಗಳು ನೆನಪಿಗೆ ಬಂದು ನಗುವಿಗೆ ದಾರಿಯಾಗುವುದು. ಅಲ್ಲದೆ ದೂರದರ್ಶನದಲ್ಲಿ ಬರುವ ಹಾಸ್ಯ ಸಂಚಿಕೆ, ಹಾಗೂ ಹರಟೆ stand-up comedy(ಎದ್ದು ನಿಂತು ಹೇಳುವ ಹಾಸ್ಯ) ಹಾಸ್ಯ ಚಟಾಕಿಗಳನ್ನು ಆಲಿಸಿ ಮತ್ತು ವೀಕ್ಷಿಸಿ ಅಲ್ಲದೆ ಚುಟುಕುಗಳ ಪುಸ್ತಕವನ್ನು ಓದುವುದರಿಂದ ಮನಸ್ಸಿಗೆ ಮುದ ನೀಡುವುದರ ಜೊತೆಗೆ ಒತ್ತಡದ ಮನಸ್ಸು ನಿರಾಳತೆ ಯನ್ನು ಪಡೆಯುವುದಾಗಿದೆ ಎಂತಹ ಕಠೋರ ಹೃದಯವನ್ನು ನಾವು ಒಂದು ಮಂದಹಾಸದಿಂದ ಗೆಲ್ಲಬಹುದಾಗಿದೆ. ಆದ್ದರಿಂದ ನಗುವೊಂದು ನೈಸರ್ಗಿಕ ಆಭರಣವಾಗಿದೆ.

*"Always wear a smile*
*Because your smile is a*
*Reason for many other to* ***Smile"......***

ಈ ಇಂಗ್ಲಿಷ್ ಗಾದೆಯ ಸಾರಾವಿಷ್ಟೇ ಯಾವಾಗಲೂ ನಿಮ್ಮ ನಗುವೆಂಬ ಆಭರಣ ಹೊಳೆಯುತ್ತಿರಲಿ ಇಂತಹ ಒಂದು ನಿಷ್ಕಲ್ಮಶ ನಗು ಇನ್ನೊಬ್ಬರ ಮುಖದಲ್ಲೂ ನಗುವಿನ ಹೊನಲನ್ನು ಹೋಮ್ಮಿಸಲಿ ಎಂದು.ಆದ್ದರಿಂದ ಆದಷ್ಟು ನಾವು ಇತರರೊಂದಿಗೆ ನಗುನಗುತ ಮಾತನಾಡಿದರೆ ನಮ್ಮ ಮನೋವ್ಯಥೆಯನ್ನು ಹಂಚಿಕೊಂಡರೆ ಹಗುರ ಮನದ ಸ್ಪರ್ಶ ಪಡೆಯಬಹುದಾಗಿದೆ.

## ನಗುವಿನ ಪ್ರಯೋಜನೆಗಳು

* ನಗು ದೇಹಕ್ಕೆ ವಿಶ್ರಾಂತಿ ನವ ಚೈತನ್ಯ ಒದಗಿಸುತ್ತದೆ
* ನಗುನೋ ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದೆ ನಗುವು ಎಂಡಾರ್ಫಿನ್ (ದೇಹಕ್ಕೆ ಅವಶ್ಯಕ ರಾಸಾಯನಿಕಗಳು) ಬಿಡುಗಡೆಯನ್ನು ಪ್ರಚೋದಿಸುತ್ತದೆ.
* ನಗುವು ಹೃದಯದ ಆಯಾಸವನ್ನು ನೀಗಿಸುತ್ತದೆ. *ನಗುವು ನೈಸರ್ಗಿಕ ನೋವು ನಿವಾರಕದಂತೆ ಕೆಲಸ ಮಾಡುತ್ತದೆ.
* ಉಸಿರಾಟದ ಕಾಯಿಲೆಗಳಿಗೆ ನಗು ರಾಮಬಾಣ ವಿದ್ದಂತೆ.
* ಅನವಶ್ಯಕ ಕ್ಯಾಲರಿಗಳನ್ನು ನಗುವುದರಿಂದ ನಾವು ಕಡಿಮೆ ಮಾಡಬಹುದಾಗಿದೆ.
* 10 ನಿಮಿಷದ ನಗು 15 ನಿಮಿಷದ ಏರೋಬಿಕ್ಸ್ ವ್ಯಾಯಾಮಕ್ಕೆ ಸಮವಾಗಿದೆ.
* ನಗುವು ದೇಹದಲ್ಲಿಯ ಗ್ಲುಕೋಸ್ ಪ್ರಮಾಣವನ್ನು ಶಮನ ಮಾಡುವುದಾಗಿದೆ.
* ನಿದ್ರೆಯ ಗುಣಮಟ್ಟವನ್ನು ಸುಧಾರಿಸಿ ಮನೋ ನೆಮ್ಮದಿ ನೀಡುವುದಾಗಿದೆ.
* ನಗುವು ಮುಖದ, ಹೊಟ್ಟೆಯ, ಹಾಗೂ ಶ್ವಾಸದ ಸ್ನಾಯು

***15ನೇ ಪುಟಕ್ಕೆ....***

# ಬದುಕಿನಲ್ಲಿ ಭರವಸೆ ತುಂಬುವ ಸಾಕಾರಾತ್ಮಕ ಆಲೋಚನೆಗಳು

ಒಂದೂರಿನಲ್ಲಿ ಸಾತ್ವಿಕ ಗುಣ ಹೊಂದಿದ್ದ ಸೋಮಪ್ಪನಿದ್ದನು ಬಡವನಾದರೂ ಸ್ವಾಭಿಮಾನವನ್ನು ಎಂದಿಗೂ ಮಾರದವನಾಗಿದ್ದ. ಅವನದು ಚಿಕ್ಕ ಕುಟುಂಬ ಜೀವನ ಸಾಗಿಸಲು ಸೋಮಪ್ಪ ದಿನಾಲು ಕಾಡಿಗೆ ಹೋಗಿ ಒಣಸೌದೆಗಳನ್ನು ತಂದು ಮಾರಿ ಬಂದ ಹಣದಿಂದ ಸಂತೃಪ್ತ ಜೀವನ ಸಾಗಿಸುತ್ತಿದ್ದ.

ಒಮ್ಮೊಮ್ಮೆ ಸೌದೆಗಳ ಕೊರತೆಯಿಂದ ಒಂದೇ ಹೊತ್ತಿನ ಊಟ ಮಾಡಿ ಮಲಗುತ್ತಿದ್ದರು. ಆದರೆ ಅವನೆಂದು ಕೆಟ್ಟ ಮಾರ್ಗಗಳಿಂದ ಹಣ ಸಂಪಾದನೆಯ ಹಾದಿ ಮಾತ್ರ ತುಳಿಯುತ್ತಿದ್ದಿಲ್ಲ ಸಕಾರಾತ್ಮಕ ಆಲೋಚನೆ, ದಾನ, ಸಹಕಾರ, ಒಳ್ಳೆಯ ಗುಣಗಳನ್ನು ಹೊಂದಿದ್ದು ಕರುಣೆ ಹಾಗೂ ಸಹಬಾಳ್ವೆ ಅವನಲ್ಲಿ ಮನೆ ಮಾಡಿದ್ದವು ತನಗೆ ಊಟವಿಲ್ಲದಿದ್ದರೂ ಪರವಾಗಿಲ್ಲ ತನ್ನ ಪಾಲಿನ ಊಟವನ್ನು ಬೇರೆಯುವರಿಗೆ ಕೊಟ್ಟು ಸಂತೃಪ್ತನಾಗುತ್ತಿದ್ದ ಊರಲ್ಲಿ ಕೆಲವರು ಇವನ ಉದಾರ ಗುಣವನ್ನು ಕಂಡು ಅಪಹಾಸ್ಯ ಮಾಡುತ್ತಿದ್ದರು.

ಇವನು ಎಂದು ಮುಂದೆ ಬರುವುದಿಲ್ಲ ಇವನ ದಾರಿದ್ರ ತೊಲಗುವುದಿಲ್ಲವೆಂದು ಕುಹಕವಾಡುತ್ತಿದ್ದರು. ಏನೇ! ಕಷ್ಟ ಬಂದರೂ ಒಳ್ಳೆಯದಕ್ಕೆ ಎಂಬ ಸಕಾರಾತ್ಮಕ ಆಲೋಚನೆ ಹೊಂದಿದ್ದ ಸೋಮಪ್ಪನಿಗೆ ದೇವರು ಪರೀಕ್ಷಿಸಲು ಒಬ್ಬ ಸನ್ಯಾಸಿಯ ವೇಷ ತೊಟ್ಟು ಧರಗಿಳಿದು ಬಂದ ಯಥಾ ಪ್ರಕಾರ ಸೋಮಪ್ಪ ಕಾಡಿನೊಳಕ್ಕೆ ಸೌದೆ ಸಂಗ್ರಹಿಸಲು ನಡೆಯುತ್ತಿದ್ದನು ಆಗ ಸನ್ಯಾಸಿಯು ಅವನನ್ನು ತಡೆದು ನಿಲ್ಲು ಸೋಮಪ್ಪ ಇಂತಹ ಬಿರು ಬಿಸಿಲಿನಲ್ಲಿ ನೀನು ಕಷ್ಟ ಪಡುವುದನ್ನು ನೋಡಲಾರೆ ತಗೋ ಈ ಆಕಳನ್ನು ಇದರ ಹಾಲನ್ನು ಮಾರಿ ಬಂದ ಹಣದಿಂದ ನಿನ್ನ ಜೀವನ ಸಾಗಿಸು ಎಂದನು. ಸ್ವಾಭಿಮಾನಿಯಾದ ಸೋಮಪ್ಪನು ಸುತಾರಾಮ್ ಆಕಳನ್ನು ತೆಗೆದುಕೊಂಡು ಹೋಗಲು ಒಪ್ಪಲಿಲ್ಲ ನಾನು ದುಡಿದೆ ನನ್ನ ಜೀವನ ಸಾಗಿಸುವೆ ಇದನ್ನು ಕೊಳ್ಳುವಷ್ಟು ಹಣ ನನ್ನಲ್ಲಿಲ್ಲ. ಬೇಡ ಸ್ವಾಮಿ ಈ ಆಕಳು ಎಂದು ತಿರಸ್ಕರಿಸಿದ. ಆಗ ಸನ್ಯಾಸಿ ಈಗಲೇ ನೀನು ಇದರ ಹಣವನ್ನು ನನಗೆ ಕೊಡಬೇಡ ಮಾರಿ ಬಂದ ಲಾಭದಿಂದ ಸ್ವಲ್ಪ ಸ್ವಲ್ಪವಾಗಿ ನನಗೆ ಹಣವನ್ನು ನೀಡು ಎಂದು ಹೇಳಿ ಆಕಳನ್ನು (ಹಸು) ಅವನ ಕೈಗೆ ಇಟ್ಟ. ಸೋಮಪ್ಪ ಆಕಳನ್ನು ತಂದು ತನ್ನ ಮನೆಯಲ್ಲಿ ಕಟ್ಟಿಕೊಂಡನು ಆ ದಿನ ರಾತ್ರಿಯೇ ಕಳ್ಳರು ಬಂದು ಅವನ ಆಕಳನ್ನು ಕದ್ದುಕೊಂಡು ಹೋದರು

ತನಗಾದ ಹಾನಿಯನ್ನು ನೆನೆಯದೆ ಸೋಮಪ್ಪ ಸೌದೆ ತರಲು ಮತ್ತೆ ಕಾಡಿಗೆ ಹೊರಟ ಇದನ್ನು ಕಂಡ ಸನ್ಯಾಸಿ ಏನಾಯಿತು? ನಾನು ಆಕಳನ್ನು ಕೊಟ್ಟಿದ್ದೇನಲ್ಲ ಎಂದು ಪ್ರಶ್ನಿಸಿದ ನಡೆದ ಘಟನೆಯನ್ನು ಸೋಮಪ್ಪ ವಿವರಿಸಿದೆ ಸೋಮಪ್ಪನ ಮುಖವೆಂದು ಬಾಡಿರಲಿಲ್ಲ,

ಹತಾಶಯವಾಗಿರಲಿಲ್ಲ,ಎಲ್ಲಾ ಒಳ್ಳೆಯದಕ್ಕೆ ಸ್ವಾಮಿ ಎಂದು ಮುಗುಳ್ನಗೆ ಬೀರಿದ ! ಮತ್ತೆ ಸನ್ಯಾಸಿ ಒಂದು ನಾಣ್ಯಗಳು ತುಂಬಿದ ಬಿಂದಿಗೆಯನ್ನು ಅವನ ಕೈಗಿತ್ತನು ಈಗಲಾದರೂ ಇದನ್ನು ಜೋಪಾನವಾಗಿ ಇಟ್ಟುಕೋ, ನಿನ್ನ ಕಷ್ಟವು ಪರಿಹಾರವಾಗಲಿ ಎಂದನು

ಆದರೂ ಸೋಮಪ್ಪನ ಮನಸ್ಸು ಒಪ್ಪಲಿಲ್ಲ ಸನ್ಯಾಸಿಯ ಒತ್ತಾಯದ ಮೇರೆಗೆ ಹಣದ ಬಿಂದಿಗೆಯನ್ನು ಮನೆಗೆ ಹೊತ್ತು ಒಯ್ದನು ಒಂದು ಮೂಲೆಯಲ್ಲಿ ಆ ಬಿಂದಿಗೆಯನ್ನು ಜೋಪಾನವಾಗಿ ಇಟ್ಟು ಸಂಜೆಯ ವಾಯು ವಿಹಾರಕ್ಕೆ ಹೊರ ನಡೆದನು ಮರಳಿ ಬರುವಷ್ಟರಲ್ಲಿ ಹಣ ತುಂಬಿದ ಬಿಂದಿಗೆ ಮಾಯವಾಗಿತ್ತು ಅದು ಹೇಗೆ ಎಂದು ಅವನಿಗೆ ತೋಚದಾಯಿತು

ಆದರೂ ಅದರ ಬಗ್ಗೆ ಸ್ವಲ್ಪವೂ ಯೋಚಿಸದೆ ಊಟ ಮಾಡಿ ಮಲಗಿಬಿಟ್ಟ ದೇವರು ಕೊಟ್ಟದ್ದು ದೇವರಿಗೆ ಅರ್ಪಿತವಾಯಿತು ಎಂದು ತಿಳಿದು ನಿಟ್ಟಿಸಿರುಬಿಟ್ಟ ಪುನಃ ಮರುದಿನ ಕೊಡಲಿಯೊಂದಿಗೆ ಸೋಮಪ್ಪ ಕಾಡಿನಡೆಗೆ ನಡೆದ ಸನ್ಯಾಸಿಗೆ ಇವನನ್ನು ನೋಡುತ್ತಲೇ "ಅಲ್ಲಯ್ಯ ಅಷ್ಟು ಹಣಕೊಟ್ಟರು ಮತ್ತೇ ಏಕೆ ಕಾಡಿಗೆ ಬಂದಿರುವೇ? ಎಂದು ರೋಸಿ ಕೇಳಿದರು

ಆಗ ರಾತ್ರಿ ನಡೆದ ಘಟನೆಯನ್ನು ಸೋಮಪ್ಪ ವಿವರಿಸಿದೆ ಇದನ್ನು ಕೇಳಿ ಸನ್ಯಾಸಿ ನಿನಗೆ ಸ್ವಲ್ಪವಾದರೂ ಸಿಟ್ಟು,ಹತಾಶಯ, ಮಾನಸಿಕ ತೊಳಲಾಟ ಇಲ್ಲವೇ ಎಂದನು ಆಗ ಸೋಮಪ್ಪ ಏಕೆ? ಕೋಪಿಸಿಕೊಳ್ಳಬೇಕು ಸ್ವಾಮಿ !ಈ ಭೂಮಿಯ ಮೇಲೆ ಯಾವುದು ಶಾಶ್ವತವಲ್ಲ. ಮನದಲ್ಲಿ ಕೋಪ ಹತಾಶಯವನ್ನು ಮಾಡಿಕೊಂಡರೆ ಏನು ಸಿಗುವುದು ನನಗೆ ಸಿಗಬೇಕಾಗಿದ್ದರೆ ಅದು ಹೇಗಾದರೂ ಮಾಡಿ ಸಿಕ್ಕೇ ಸಿಗುವುದು ಒಂದು ವೇಳೆ ಆ ವಸ್ತು ವ್ಯಕ್ತಿ ಸಂದರ್ಭ ನನಗೆ

ಸಿಗಲಾರದಾದರೆ ನಾನು ಎಷ್ಟೇ! ಪರಿತಪಿಸಿದರು ಸಿಗುವುದಿಲ್ಲ. ನೀವು ನನ್ನ ದಾರಿದ್ರವನ್ನು ಹೋಗಲಾಡಿಸಲು ಅಮೂಲ್ಯವಾದ ಎರಡು ಸಂಗತಿಗಳನ್ನು ನೀಡಿದಿರಿ ಆದರೆ ಅವುಗಳ ಫಲ ಅನುಭವಿಸುವುದು ನನ್ನ ಹಣೆಯಲ್ಲಿ ಬರೆದಿಲ್ಲ ಹಾಗಾಗಿಯೇ ನನಗೆ ಅವುಗಳು ದೊರಕಲಿಲ್ಲ ಇದರಲ್ಲಿ ಕೋಪಿಸಿಕೊಳ್ಳುವ ಹತಾಶಯವಾಗುವ ಹಾಗೂ ದೈವವನ್ನು ಶಪಿಸುವ ಕಾರ್ಯವನ್ನೇಕೆ ಮಾಡಬೇಕು ಎಂದು ಕೇಳಿದ.

ಸೋಮಪ್ಪನ ಸಕಾರಾತ್ಮಕ ಆಲೋಚನೆ ಶಾಂತಿಯುತ ಮನಸ್ಸು ಹಾಗೂ ಸಹನೆಯ ಗುಣವನ್ನು ನೋಡಿ ದೇವರೇ ಸೋತು ಹೋದನು. ನಿನಗೆ ಒಳ್ಳೆಯದಾಗಲಿ ಎಂದು ಹರಸಿ ನಡೆದ. ಸೋಮಪ್ಪ ತನ್ನ ಕಾಯಕವನ್ನು ಮುಗಿಸಿ ಮನೆಗೆ ಹಿಂದಿರುಗುತ್ತಲೇ ಕಳೆದು ಹೋದ ಆಕಳು ಕಳ್ಳರ ಕೈಯಿಂದ ತಪ್ಪಿಸಿಕೊಂಡು ಅವನ ಮನೆಸೇರಿತ್ತು ಇದನ್ನು ನೋಡುತ್ತಲೇ ಸೋಮಪ್ಪ ಆಶ್ಚರ್ಯಚಕಿತನಾದ ಜೊತೆಗೆ ಅಂಗಳದಲ್ಲಿ ಬರುತ್ತಿದ್ದಂತೆಯೇ ಹಣ ತುಂಬಿದ ಬಿಂದಿಗೆ ಹೊತ್ತ ಪಕ್ಕದ ಮನೆಯ ಅಜ್ಜಿ ಅವನಿದ್ದ ಕಡೆ ಧಾವಿಸಿದಳು.

ತಗೋ ಸೋಮಪ್ಪ ನಿನ್ನ ಬಿಂದಿಗೆ ನಿನ್ನೆ ನನ್ನ ಮನೆಗೆ ಬೀಗರು ಬಂದಿದ್ದರು ಹಾಗಾಗಿ ಒಂದು ಕೊಡ ನೀರು ಬೇಕಿತ್ತು ಆದ್ದರಿಂದ ನಿನ್ನ ಮನೆಯಲ್ಲಿ ಈ ತುಂಬಿದ ಬಿಂದಿಗೆಯನ್ನು ಹೊತ್ತುಒಯ್ದೆ ಆದರೆ ಇದರಲ್ಲಿ ನೀರಿರಲಿಲ್ಲ ನೀನು ಕಷ್ಟಪಟ್ಟು ಸಂಗ್ರಹಿಸಿಟ್ಟಿದ್ದ ಹಣವಿತ್ತು ಆದ್ದರಿಂದ ಇದನ್ನು ಜೋಪಾನವಾಗಿ ತೆಗೆದಿಟ್ಟು ನಿನಗೆ ಹಿಂದಿರುಗಿಸುತ್ತಿದ್ದೇನೆ ಎಂದು ಹೇಳಿ ಹೋದಳು.

**ಕಥೆಯ ತಿರುಳು:** ನಾವು ಒಳ್ಳೆಯ ಸ್ವಭಾವ ಸಕಾರಾತ್ಮಕ ಯೋಚನೆ, ತಾಳ್ಮೆ ಹಾಗೂ ಸಹಾಯ ಗುಣಗಳನ್ನು ಹೊಂದಿದ್ದರೆ ಬೆಟ್ಟದಂತಹ ಕಷ್ಟಗಳು ಕರಗಿ ಸುಖದ ಮೆಟ್ಟಿಲಾಗುವುದು ಎಂಬುದಾಗಿದೆ.

ಹಾಗಾದರೆ ಸಕಾರಾತ್ಮಕ ಆಲೋಚನೆಗಳೆಂದರೇನು, ಒಂದು ಇಂಗ್ಲೀಷ್ ಗಾದೆಯಂತೆ smart work is better than hard work ಎಂಬಂತೆ ನಾವು ಈಗ ಶ್ರಮದ ಕೆಲಸಗಳನ್ನು ಕಡಿಮೆ ಮಾಡಿ ಚತುರ ಕೆಲಸಗಳನ್ನು ಮೈಗೂಡಿಸಿಕೊಂಡಿದ್ದೇವೆ ಇದರ ಜನಿತವೇ ಯಂತ್ರೋಪಕರಣಗಳ ಬಳಕೆಯಾಗಿದೆ. ನಮ್ಮಲ್ಲಿಯ ಸಕಾರಾತ್ಮಕ ಯೋಚನೆಗಳು ಜೀವನದಲ್ಲಿ ಎದುರಿಸಲಿರುವ ಎಂತಹ ಕಷ್ಟಗಳನ್ನು ದೂರ ಮಾಡಿ ಒಳನೆಮ್ಮದಿಯನ್ನು ನೀಡಲು ದಾರಿಯಾಗಿದೆ.ಈ ಯಾಂತ್ರಿಕ ಯುಗದಲ್ಲಂತೂ ಸಕಾರಾತ್ಮಕ ಯೋಚನೆ ಯೋಜನೆಗಳು ಅತ್ಯವಶ್ಯಕ. ಮಗುವಿನಿಂದ ಹಿಡಿದು ವೃದ್ಧರವರೆಗೂ ಈ ಆಧುನಿಕ ಜೀವನಶೈಲಿ ಅವಸರದಿಂದ ಕೂಡಿರುವುದಾಗಿದೆ ಏಳುವಾಗ, ತಿನ್ನುವಾಗ, ಹೊರಡುವಾಗ, ಮಲಗುವಾಗ ಕೂಡ ಆತುರ ಅವಸರದಿಂದ ಕೂಡಿದುದಾಗಿದೆ. ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯದ ಕೊರತೆ ಉಂಟಾಗಿ ಹಲವಾರು ರೋಗಗಳಾದ ಬಿಪಿ (ರಕ್ತದ ಒತ್ತಡ)ಶುಗರ್ (ಸಕ್ಕರೆ ಕಾಯಿಲೆ ಯಂತಹ) ರೋಗಗಳು ವಯೋ ವ್ಯತ್ಯಾಸ ಮಾಡದೆ ನಮ್ಮನ್ನು ಆಕ್ರಮಿಸುತ್ತಲಿವೆ. ಅಲ್ಲದೆ ಮಾನಸಿಕ ಖಿನ್ನತೆ, ನಕಾರಾತ್ಮಕ ಯೋಚನೆಗಳು ,ಪ್ರಕ್ಷುಬ್ಧ ಮನಸ್ಸು, ದಾನವ ಗುಣಗಳು ಇತ್ತೀಚಿನ ಜನರಲ್ಲಿ ಸಾಮಾನ್ಯವಾಗಿ ಕಂಡು ಬರುತ್ತಿವೆ.

ಆದ್ದರಿಂದ ಮನೋವಿಚಲಿತರಾಗದೆ ಸನ್ಮಾರ್ಗ ಸುವಿಚಾರ, ಸಹ ಧಾರ್ಮಿಕತೆ, ಹಿತ ಸಮಾಜದ ಕಾರ್ಯಗಳು, ಮಧುರ ಬಾಂಧವ್ಯ ಬೆಳೆಸಿಕೊಂಡು!! ಕೋಪ, ಆತುರ ಭಾವನೆಗಳ ವ್ಯರ್ಜ ಮಾಡುವುದರೊಂದಿಗೆ ಸಮಾಜ ಹಾಗೂ ಸಹಭಾಂಧ'ವ್ಯ ಘಟಕಗಳ ನಿರ್ವಾಣ ಮಾಡಬಹುದಾಗಿದೆ

## ಸಕಾರಾತ್ಮಕ ಆಲೋಚನೆಗಳ ಅಳವಡಿಸಿಕೊಳ್ಳುವ ಮಾರ್ಗಗಳು

- ಸದೃಢ ದೇಹದಲ್ಲಿ ಸದೃಢ ಮನವೆಂಬಂತೆ ನಮ್ಮ ಕಾಯವನ್ನು ಕಾಯಿಲೆಗಳು ಸೋಕದಂತೆ ನೋಡಿಕೊಳ್ಳುವುದು.
- ಉತ್ತಮ ಆಹಾರ ಪದ್ಧತಿ ಹಾಗೂ ಸಾದ್ವ ಆಹಾರ ಸೇವನೆ.
- ನಿಯಮಿತ ವ್ಯಾಯಾಮ ಹಾಗೂ ಲಘು ವಿಹಾರಗಳು
- ಪ್ರಾತಃಕಾಲದಲ್ಲಿ ಯೋಗ ಧ್ಯಾನ ಹಾಗೂ ಮಧುರ ಸಂಗೀತ ಆಲಿಸುವುದು.
- ಹಿಂದಿನ ಕಹಿ ಘಟನೆಗಳ ಮರೆತು ಸುಘಟನೆಗಳ ಮೆಲುಕು ಹಾಕುವುದು ಇಂದಿನ ದಿನ ತುಂಬಾ ಸಂತೋಷ ಹಾಗೂ ಯಶಸ್ವಿಯಾಗಿರುವುದೆಂದು ಭಾವಿಸುವುದು.
- ಪ್ರತಿ ಕೆಲಸದಲ್ಲಿ ಆಶಾಭಾವನೆ ಹೊಂದಿ ನಕಾರಾತ್ಮಕ ಯೋಚನೆ ಕೈ ಬಿಡುವುದು.
- ಸುಕರ್ಮ ಸುವಿಚಾರ ಹಾಗೂ ಸುಮಾರ್ಗಗಳು ನಿಮ್ಮ ದಿನಗಳನ್ನು ನಡೆಸುತ್ತಿರಲಿ.
- ನಕಾರಾತ್ಮಕ ಭಾವನೆಗಳನ್ನು ಅದುಮಿಟ್ಟುಕೊಂಡು ಯಶಸ್ವಿಗಾಗಿ ಪುನರ್ ಪ್ರಯತ್ನ ಮಾಡುವುದು.
- ಕಷ್ಟ ಸಂಧಿಗ್ಧ ಹಾಗೂ ಅಚಾತುರ್ಯ ಸಮಯದಲ್ಲಿ ನಿಮ್ಮ ಮನಸ್ಸನ್ನು ನೀವೇ ಸಂತೈಸಿಕೊಳ್ಳುವುದು.

- ಜಗದ ಪ್ರತಿ ಚರಾ ಚರಗಳಲ್ಲಿ ಪ್ರೀತಿ, ಕರುಣೆ ,ಸಹ ಸಂಬಂಧದ ಗುಣಗಳನ್ನು ಮೈಗೂಡಿಸಿಕೊಳ್ಳುವುದು.
- ಪರಿಸರ ಪ್ರೇಮಿಯಾಗಿದ್ದು ವಾರಕ್ಕೊಮ್ಮೆ ನಿಸರ್ಗದ ಮಡಿಲಲ್ಲಿ ಒಂದು ಸಂಜೆಯಾದರೂ ಏಕಾಂತವಾಗಿ ಕಳೆಯಬೇಕು.
- ಒತ್ತಡದ ಅವಸರದ ಬದುಕಿನಲ್ಲೂ ಒಂದು ತಾಸು ಧಾರ್ಮಿಕ ಪಠಣಗಳನ್ನು ಆಲಿಸಬೇಕು.
- ಜೀವನದ ಪ್ರತಿ ರಂಗದ ಸೋಲನ್ನು ಪರೀಕ್ಷೆಯಾಗಿ ತೆಗೆದುಕೊಳ್ಳುವುದು.
- ಕೋಪ ಅಸೂಯೆ, ಧನದಾಹ ಕ್ರೂರತೆ ದುರಾಭ್ಯಾಸ ಗಳನ್ನು ಆದಷ್ಟು ನಿರ್ನಾಮ ಮಾಡಿಕೊಳ್ಳುವುದು.
- ಸಾಮಾಜಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವುದು.
- ಉತ್ತಮ ಪುಸ್ತಕಗಳ ಒಡನಾಡಿಯಾಗಬೇಕು, ರಂಗಭೂಮಿಯ ಕಲೆಗಳಾದ ಹಾಸ್ಯ ನಾಟಕ, ಪ್ರಸಿದ್ಧ ನೃತ್ಯಗಳು, ರೂಪಕಗಳು, ಹಾಗೂ ಹರಟೆಕಟ್ಟೆ ಯಂತಹ ಕಿರು ಪ್ರಸಾರವನ್ನು ದೂರದರ್ಶನದಲ್ಲಿ ನೋಡಬೇಕು.
- ಉಚಿತ ವ್ಯಕ್ತಿಗಳ ಸಂಗ ಹಾಗೂ ಹಿರಿಯರ ಸವಿನುಡಿ ಗಳನ್ನು ಆಲಿಸಬೇಕು.
- ನಮ್ಮ ಮೇಲೆ ನಕಾರಾತ್ಮಕ ಬೀರುವ ವ್ಯಕ್ತಿ ಹಾಗೂ ಘಟನೆಗಳಿಂದ ಆದಷ್ಟು ದೂರವಿರಬೇಕು .
- ವೈರಿಗಳನ್ನು ಅಲಕ್ಷಿಸಬೇಕು.

ಹೀಗೆ ಮಾನವನ ಬದುಕಿನಲ್ಲಿ ಸಕಾರಾತ್ಮಕ ಯೋಚನೆ ಹಾಗೂ ಯೋಜನೆಗಳು ಪ್ರಜ್ವಲಿಸಿದ್ದೇ ಆದರೆ ಶಾಂತ ಹಾಗೂ ನಿರ್ಲಿಪ್ತ ಸಮಾಜವನ್ನು ಬೆಳೆಸಬಹುದಾಗಿದೆ 12ನೇ ಶತಮಾನದಲ್ಲಿ ಶರಣಾದಿ ಪ್ರಮಥಮರು ಹೀಗೆ ತಾನೇ ಬಾಳಿ ಬದುಕಿದ್ದು!! ಯಾವುದೇ ದ್ವೇಷ, ಅಸೂಯೆ, ಅಶಾಂತಿ ಹಾಗೂ ಕುಚೋದ್ಯಗಳ ಸೋಂಕು ಇಲ್ಲದೆ. ಆಗಿನ ಶರಣರು ಸದಾ ಶಾಂತಿ, ನೆಮ್ಮದಿ, ಸಹಕಾರ, ಒಳಾನಂದ, ಸಂತೃಪ್ತ ಜೀವನ ನಡೆಸಿದ್ದರಿಂದ ಅದೊಂದು ಭಕ್ತಿ ಯುಗವಾಗಿ ಸುವರ್ಣ ಇತಿಹಾಸವನ್ನು ಸೇರಿದ್ದು..!! ನಮಗೆಲ್ಲಾ ಆದರ್ಶ ಮಾರ್ಗವಾಗಿದ್ದು...



**ಅಶ್ವಿನಿ ಅಂಗಡಿ,**
ಬಾದಾಮಿ

# ವಿಚಾರ ವಿನಿಮಯ

- ಮಾನವೀಯತೆಯ ಮೇಲಿನ ನಂಬಿಕೆಯನ್ನು ಕಳೆದು ಕೊಳ್ಳಬೇಡಿ.
- ಮನುಷತ್ವ ಒಂದು ಸಾಗರವಿದ್ದಂತೆ. ಕೆಲ ಹನಿಗಳು ಗಲೀಜಾದ ಮಾತ್ರಕ್ಕೆ ಇಡೀ ಸಮುದ್ರವೇ ಕೊಳಕಾಗುವುದಿಲ್ಲ.
- ಕೆಲವು ದಿನದ ಬಾಳುವೆಯದು ಈ ಜನ್ಮ. ಜಗತ್ತಿನ ಸುಖ ಭೋಗಗಳೆಲ್ಲಾ ಕ್ಷಣಿಕ.
- ಯಾರು ಪರರ ಹಿತಕ್ಕಾಗಿ ಬದುಕುವರೋ ಅವರೇ ಜೀವಂತರು.

ನಿನ್ನೆಯ ದಿನದ ಚಿಂತೆಯು ಯಾಕೆ?
ಇಂದಿನ ದಿನವು ಎದುರಿಗಿದೆ!
ನಾಳೆಯ ದಿನಕ್ಕೆ ಅವಸರ ಯಾಕೆ?
ವ್ಯವಸ್ಥಿತ ಬದುಕು ಇಂದು ಇದೆ!
ಚಿಂತೆಯು ಮಾಡುವ ಮನುಜಗೆ ದಿನದ
ಸಮಯವು ವ್ಯರ್ಥವಾಗುತ್ತಿದೆ!

ಇಂದಿನ ಬದುಕು ಸುಂದರಗೊಳ್ಳಲು ಮನಸ್ಸನ್ನು ಅಣಿಗೊಳಿಸಬೇಕಾಗಿದೆ!

**–ಸ್ವಾಮಿ ವಿವೇಕಾನಂದ**

- ◆ ಬುದ್ಧಿ ಶ್ರೇಷ್ಠವಾದುದು ನಿಜ. ಆದರ ಕಾರ್ಯವ್ಯಾಪ್ತಿ ಸೀಮಿತವಾದುದು. ಸ್ಫೂರ್ತಿ ಉಂಟಾಗುವುದು ಹೃದಯದ ಮೂಲಕ; ಹೃದಯವೇ ಸ್ಫೂರ್ತಿಯ ಮೂಲ.
- ◆ ವತ್ಸ, ಪ್ರೀತಿಗೆ ಸೋಲೆಂಬುದಿಲ್ಲ; ಇಂದೋ ನಾಳೆಯೋ ಅಥವಾ ಯುಗಾಂತರವೋ ಸತ್ಯ ಗೆದ್ದೇ ತೀರುವುದು. ಪ್ರೀತಿ ಖಂಡಿತ ಜಯ ಗಳಿಸುತ್ತದೆ. ನಮ್ಮ ಮಾನವಬಂಧುಗಳನ್ನು ನೀವು ಪ್ರೀತಿಸುತ್ತೀರೇನು?
- ◆ ಜೀವನಾವಧಿ ಅಲ್ಪ, ಪ್ರಾಪಂಚಿಕ ವಿಷಯಗಳೆಲ್ಲ ಕ್ಷಣಿಕ. ಆದರೆ ಯಾರು ಇತರರಿಗಾಗಿ ಬಾಳುತ್ತಾರೋ ಅವರೇ ನಿಜವಾಗಿ ಬಾಳುತ್ತಾರೆ. ಉಳಿದವರು ಜೀವನ್ ಮೃತರು.
- ◆ ವಿಕಾಸವೇ ಜೀವನ; ಸಂಕೋಚವೇ ಮರಣ. ಪ್ರೇಮವೆಲ್ಲಾ ವಿಕಾಸ; ಸ್ವಾರ್ಥವೆಲ್ಲಾ ಸಂಕೋಚ; ಆದುದರಿಂದ ಪ್ರೇಮವೇ ಬದುಕಿನ ಧರ್ಮ.

**–ಸ್ವಾಮಿ ವಿವೇಕಾನಂದ**

# ಗಳಿಸಿದ್ದು ಜೊತೆ ಬರುವುದಿಲ್ಲ

ಒಬ್ಬ ಶ್ರೀಮಂತ ತನ್ನ ಮುದ್ದು ಮಗನಿಗೆ ಸಾಯುವ ಸಮಯದಲ್ಲಿ ವಿಲ್ ಪತ್ರದ ಜೊತೆ ತನ್ನ ಪಾದರಕ್ಷೆಗಳನ್ನು ನೀಡಿ ಹೇಳಿದ "ವಿಲ್ ಪತ್ರದಲ್ಲಿ ನಿನಗೆ ನನ್ನೆಲ್ಲಾ ಆಸ್ತಿಯನ್ನು ಬರೆದಿದ್ದೇನೆ. ನೀನು ಸುಖವಾಗಿ ಬಾಳು ಆದರೆ ನನ್ನ ಕೊನೆಯ ಆಸೆಯೊಂದಿದೆ ಅದನ್ನು ನೆರವೇರಿಸು ಅಷ್ಟು ಸಾಕು. ಅದೇನೆಂದರೆ ನಾನು ಸತ್ತ ಮೇಲೆ ನನ್ನ ಪಾದಕ್ಕೆ ಈ ಹಳೆಯ ಚಪ್ಪಲಿಯನ್ನು ತೊಡಿಸಿ ಅಂತ್ಯಕ್ರಿಯೆ ನೆರವೇರಿಸು!" ಎಂದು ಹೇಳುತ್ತಾನೆ...

ಮಗ ತನ್ನ ಕೆನ್ನೆಯ ಮೇಲೆ ಜಾರುತ್ತಿದ್ದ ಕಣ್ಣೀರನ್ನು ಒರೆಸಿಕೊಳ್ಳುತ್ತಾ ಈ ಸಣ್ಣ ಆಸೆಯನ್ನು ನಾನು ಖಂಡಿತ ನೆರವೇರಿಸುತ್ತೇನೆ ಎಂದು ಅಪ್ಪನಿಗೆ ಮಾತು ಕೊಡುತ್ತಾನೆ.

ತಂದೆಯು ಕೊನೆಯುಸಿರೆಳೆದ ದಿನ ವಿಧಿ ವಿಧಾನ ಕಾರ್ಯಗಳನ್ನು ಮಾಡಿದ ಪಂಡಿತರು ಸಾಧ್ಯವೇ ಇಲ್ಲ ಇದು ನಮ್ಮ ಅಂತ್ಯಕ್ರಿಯೆ ಸಂಪ್ರದಾಯದಲ್ಲೇ ಇಲ್ಲವೆಂದು ನಿರಾಕರಿಸುತ್ತಾರೆ. ಎಷ್ಟೇ ಪ್ರಯತ್ನ ಪಟ್ಟರು ಆ ಶ್ರೀಮಂತ ವ್ಯಕ್ತಿಗೆ ಹಳೆಯ ಚಪ್ಪಲಿ ತೊಡಿಸಲು ಸಾಧ್ಯವೇ ಆಗುವುದಿಲ್ಲ!...

ಈ ವಿಚಾರವಾಗಿ ಸಂಬಂಧಿಕರು, ಊರಿನ ಹಿರಿಯ ಮುಖಂಡರು ಬುದ್ಧಿವಂತರು ಇತರೆ ಎಲ್ಲರೂ ಸೇರಿ ಈ ವಿಷಯದ ಕುರಿತು ಚರ್ಚಿಸುತ್ತಿರುತ್ತಾರೆ. ಅಷ್ಟರಲ್ಲಿ ಅಲ್ಲಿಗೆ ಓಡೋಡಿ ಬಂದ ಆ ಶ್ರೀಮಂತನ ಸ್ನೇಹಿತ ಮಗನಿಗೆ ಪತ್ರ ನೀಡಿ ಹೇಳುತ್ತಾನೆ "ನಿಮ್ಮ ತಂದೆಯವರು ಕೆಲ ದಿನಗಳ ಹಿಂದೆ ನನ್ನನ್ನು ಕರೆದು ಪತ್ರವನ್ನು ನನ್ನ ಮಗನಿಗೆ ನನ್ನ ಅಂತ್ಯ ಸಂಸ್ಕಾರದ ಕೊನೆಗಳಿಗೆಯಲ್ಲಿ ನೀಡಲು ತಿಳಿಸಿದ್ದರು" ಎಂದು ಹೇಳುತ್ತಾನೆ...

ತುಂಬಾ ಕುತೂಹಲದಿಂದ ಆ ಪತ್ರವನ್ನು ತೆರೆದು ನೋಡಿದಾಗ ಅವರ ತಂದೆ ಬರೆದಿರುತ್ತಾರೆ...

"ಪ್ರಿಯ ಪುತ್ರನೇ ನೋಡಿದೆಯಾ? ದೊಡ್ಡ ಫ್ಯಾಕ್ಟರಿ ಭವ್ಯ ಬಂಗಲೆ ಕಾರು ಚಿನ್ನ ಒಡವೆ ಫಾರಂ ಹೌಸ್ ಇದೆಲ್ಲದರ ಒಡೆಯನಾಗಿದ್ದರೂ ನಾನು ಒಂದು ಜೊತೆ ಹಳೆಯ ಚಪ್ಪಲಿಯನ್ನು ಕೂಡ ತಗೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ ಇಷ್ಟೇ ಬದುಕಿನ ಸತ್ಯ! ನಿನಗೂ ಒಂದು ದಿನ ಸಾವು ಹತ್ತಿರವಾಗುತ್ತದೆ ನೀನು ಕೇವಲ ಬಿಳಿ ಬಟ್ಟೆಯಲ್ಲಿ ಇಹಲೋಕ ತ್ಯಜಿಸಬೇಕು ಈಗಲೇ ಎಚ್ಚರಗೊಳ್ಳು ದುಡ್ಡಿಗಾಗಿ ಯಾರನ್ನು ನೋಯಿಸಬೇಡ ಪೀಡಿಸಬೇಡ ಅನ್ಯಾಯ ಮತ್ತು ಅಧರ್ಮದಿಂದ ಹಣ ಸಂಪಾದನೆ ಮಾಡಬೇಡ ನೀನು ಗಳಿಸಿದ ಹಣದಲ್ಲಿ ಕೆಲ ಭಾಗವನ್ನು ನಿರ್ಗತಿಕರಿಗೆ ಇಲ್ಲದವರಿಗೆ ದಾನ ಮಾಡು ಸತ್ಕಾರ್ಯಗಳಿಗೆ ಹಣವನ್ನು ಬಳಸು ಸತ್ತಾಗ ನಿನ್ನ ಹಿಂದೆ ಬರುವುದು ನಿನ್ನ ಕರ್ಮಗಳು ಮಾತ್ರ! ಎಂದು ಪತ್ರ ಮುಗಿಸುತ್ತಾನೆ....

ಈ ಪತ್ರ ಓದುತ್ತಾ ಕಣ್ಣುಗಳು ತುಂಬಿ ಬಂದವು. ಮನುಷ್ಯ ಎಷ್ಟೇ ಗಳಿಸಿದರು ಎಲ್ಲವನ್ನು ಇಲ್ಲೇ ಬಿಟ್ಟು ಹೋಗಬೇಕು. ಏನೇ ಆಗಿದ್ದರೂ ಏಕಿಷ್ಟು ಅಹಂಕಾರ, ನೀಚತನ ಕ್ರೂರತನ ಅಂತ ಯೋಚಿಸುತ್ತಿದ್ದೆ ನನ್ನ ಮೊಬೈಲ್ ರಿಂಗ್ ಆಗುತ್ತಿತ್ತು ಅದರಲ್ಲಿ...

**"ಒಳಿತು ಮಾಡು ಮನುಸ......ನೀ ಇರೋದು ಮೂರು ದಿವಸ..."**

**"ಉಸಿರು ನಿಂತ ಮ್ಯಾಗೆ... ನಿನ್ನ ಹೆಸರು ಹೇಳುತಾರ... ಹೆಣ ಅನ್ನುತ್ತಾರ... ಮಣ್ಣಾಗ ಹೂಳುತಾರ"....**



ಹಾಡು ಮತ್ತಷ್ಟು ಬದುಕಿನ ವಾಸ್ತವದ ಬಗ್ಗೆ ಎಚ್ಚರಿಸಿದಂತಿತ್ತು...

**ಶರತ್ ಕುಮಾರ್**
ಶಿಕ್ಷಕರು, ಅಭಿನವ ಭಾರತಿ
ವಿದ್ಯಾ ಕೇಂದ್ರ, ಪ್ರೌಢಶಾಲೆ
ಕನ್ನಡ ಮಾಧ್ಯಮ, ಮಂಡ್ಯ.

# ನಗಲು ಬಿಗುಮಾನವೇಕೆ..?

***...12ನೇ ಪುಟದಿಂದ***

ಗಳಿಗೆ ವ್ಯಾಯಾಮವನ್ನು ಒದಗಿಸುತ್ತದೆ.

* ಆತ್ಮಸ್ಥೈರ್ಯ ಹಾಗೂ ಸಕಾರಾತ್ಮಕ ಮನೋಭಾವ ಬೆಳೆಸುವುದಾಗಿದೆ.
* ನಗುವ ವ್ಯಕ್ತಿಯು ಸ್ನೇಹಪರನಾಗಿರುತ್ತಾನೆ.
* ಉತ್ತಮ ಸಾಮಾಜಿಕ ಸಂಬಂಧ ಹೊಂದಿರುವವನಾಗಿ ದ್ದಾನೆ.

ಹಾಗಾದರೆ ಬನ್ನಿ ಸ್ನೇಹಿತರೆ ನಾವು ಬದುಕಿರುವ ಈ ಮೂರು ದಿನದ ಅವಧಿಯಲ್ಲಿ ವ್ಯಥ ಚಿಂತಿಸಿ ಕಾಲಹರಣ ಮಾಡದೆ "ಬಂದದ್ದು ಬರಲಿ, ಬಾಳಲ್ಲಿ ನಗುವಂದಿರಲಿ ಎಂದು ಹೇಳೋಣ"ಈ ಲೇಖನ ಓದಿ ಒಂದು ಕಿರುನಗೆ ಬೀರಿದರೆ ಸಾಕು ನನ್ನ ಬರಹಕ್ಕೆ.


Please smile....

**ಸಂಗ್ರಹ**

# ಅಭಿನವ ಭಾರತಿ ವಿದ್ಯಾ ಕೇಂದ್ರ, ಪ್ರಾಥಮಿಕ ಶಾಲೆ, ಮಂಡ್ಯ, ಪರಿಸರ ದಿನದಂದು ನಡೆದ ಕಾರ್ಯಕ್ರಮದ ಒಂದು ನೋಟ






A
ಅರ್ಜುನ
ಧರ್ಮ ರಕ್ಷಕ ಪಾಂಡವ
B
ಬಲರಾಮ
ಕೃಷ್ಣನ ಸಹೋದರ
C
ಚಾಣುಕ್ಯ
ಪ್ರತಿಜ್ಞೆಯನ್ನು ಸಾಧಿಸುವ ಛಲಗಾರ
D
ಧೃವ
ಮಿನುಗುತಾರೆ ಮತ್ತು ಭಕ್ತ
E
ಏಕಲವ್ಯ
F
ಫೋರ್ ವೇದಗಳು
ನಮ್ಮದೇಶದ ಸಂಪತ್ತು
RIG VEDA
YAJUR VEDA
ATHARVA VEDA
G
ಗಾಯತ್ರಿದೇವಿ
ಬುದ್ಧಿ ಶಕ್ತಿಯ ಅಧಿದೇವತೆ
H
ಹರಹರ ಮಹದೇವ
ಅರ್ಧನಾರೀಶ್ವರ
I
ಇಂದ್ರ
ಸ್ವರ್ಗದ ಅಧಿಪತಿ
J
ಜಟಾಯು
ಧರ್ಮವನ್ನು ರಕ್ಷಿಸಿದ
(ರಾಮ ಪಕ್ಷಿ)
K
ಕೃಷ್ಣ
ಧರ್ಮದ ಹಾದಿಯಲ್ಲಿ
ನಡೆಯುವವ
L
ಲವಕುಶ
ಸೀತಾರಾಮರ ಪುತ್ರರು
M
ಮಾರ್ಕಂಡೇಯ
ಭಕ್ತ ಚಿರಂಜೀವಿ ಯಾದವನು
N
ನಾರದ
ಲೋಕ ಕಲ್ಯಾಣಕ್ಕೆ ನಿಂದನೆಯನ್ನು
ಸ್ವೀಕರಿಸಿದವರು
O
ಓಂಕಾರ
ಅದ್ಭುತ ಶಕ್ತಿ ಬ್ರಹ್ಮಾಂಡದ
ಉದ್ಘೋಷ
P
ಪವನ ಪುತ್ರ ಹನುಮಾನ್
ಅಸಾಧ್ಯವನ್ನು ಸಾಧ್ಯವನ್ನಾಗಿಸುವವರು
(ಶ್ರೀರಾಮ ಭಂಟ)
Q
ಕ್ವೀನ್ ಗಾಂಧಾರಿ
R
ರಾಮ
S
ಸೂರ್ಯ
ವಿಶ್ವಕ್ಕೆ ಬೆಳಕನ್ನು ನೀಡುವವರು
T
ತುಳಸಿ
ಸರ್ವರೋಗಗಳನ್ನು ನಿವಾರಿಸುವ
ಆಯುರ್ವೇದ ಸಸಿ
U
ಉದ್ಧವ
ಕೃಷ್ಣನ ಗೆಳೆಯ
V
ವಾಮನ
ಭೂಮಂಡಲದ ಉಳಿವಿಗಾಗಿ
ಅವತರಿಸಿದವರು
W
ವಾಟರ್
ಗಂಗಾಸ್ನಾನ ತುಂಗಾಪಾನ
(ಜೀವಜಲ)
XEERABDI
DWADASI IS A
HINDU RITUAL
X
Y
ಯಶೋಧ
ಕೃಷ್ಣನ ಆದರ್ಶ ತಾಯಿ
Z
ಜಾಂಬವಂತ